ಉದ್ಘಾಟನೆ ಮಾಡುತ್ತೇವೆಂದು ಹೇಳಿದ್ದಿರಿ. ಇದು ಒಂದು ಅವಮಾನ. ಮಾಜಿ ಮುಖ್ಯಮಂತ್ರಿಗಳು ಇಲ್ಲಿ ವಿಕಾಸ ಸೌಧವನ್ನು ಉದ್ಘಾಟನೆ ಮಾಡಿ ಹೋಗಿದ್ದಾರೆ. ರಾಜ್ಯಪಾಲರ ಭಾಷಣದಲ್ಲಿ ಇದನ್ನು ಏಕೆ ಸೇರಿಸಿದಿರಿ ಎಂಬುದನ್ನು ಹೇಳಬೇಕು. ವಿಕಾಸ ಸೌಧವನ್ನು ನಾನು ಇನ್ನೇನು ಇಷ್ಟೇ ದಿವಸದಲ್ಲಿ ಉದ್ಘಾಟನೆ ಮಾಡುತ್ತೇವೆಂದು ಹೇಳಿ ಇಂತಹ ಅಚಾತುರ್ಯವನ್ನು ಮಾಡುವುದಕ್ಕೆ ಬಿಡಬಾರದು ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಶ್ರೀರಾಮರೆಡ್ಡಿಯವರೇ, ತಾವು ದಯಮಾಡಿ 15 ನಿಮಿಷದಲ್ಲಿ ಮುಗಿಸಬೇಕು.

5. ಮಂತ್ರಿಗಳ ಹೇಳಿಕೆ

ವಿಷಯ: ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಸಮಗ್ರ ನೀರಾವರಿ ಯೋಜನೆಗಳ ಬಗ್ಗೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ಮೊನ್ನೆ ದಿವಸ ಮಾನ್ಯ ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪನವರು, ಉಪ ನಾಯಕರಾದ ಮಾನ್ಯ ಕಾರ್‌ಜೋಳ್‌ರವರು ಹಾಗೂ ಅನೇಕ ಸದಸ್ಯರುಗಳು ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ ಸಮಗ್ರ ನೀರಾವರಿ ಯೋಜನೆಗಳ ಬಗ್ಗೆ ಮತ್ತು ಅಲ್ಲಿ ಏನು ಸತ್ಯಾಗ್ರಹ ಈ ವಿಚಾರದಲ್ಲಿ ನಡೆಯುತ್ತಿದೆ ಆ ಸತ್ಯಾಗ್ರಹ ಯಾವ ಉದ್ದೇಶದಿಂದ ನಡೆದಿದೆ ಮತ್ತು ಅದಕ್ಕೆ ಸರ್ಕಾರ ಸ್ಪಂದಿಸಬೇಕು ಮತ್ತು ವಿಶೇಷವಾಗಿ ಜಲ ಸಂಪನ್ಮೂಲ ಇಲಾಖೆಯು ಇದಕ್ಕಾಗಿ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆಯೋ ಅವೆಲ್ಲದರ ಬಗ್ಗೆ ಪೂರ್ಣವಾಗಿ ವಿವರಿಸಬೇಕು ಎನ್ನತಕ್ಕಂಥ ಮಾತನ್ನು ಮಾನ್ಯ ಹಿರಿಯ ಸದಸ್ಯರುಗಳು ಎತ್ತಿದ್ದರು. ಅದಕ್ಕಾಗಿ ನಾನು ಸವಿಸ್ತಾರವಾದ ಹೇಳಿಕೆಯನ್ನು ತಮ್ಮ ಅಪ್ಪಣೆ ಪಡೆದು ಈಗ ಸದನದಲ್ಲಿ ಕೊಡುತ್ತಿದ್ದೇನೆ. ಕೃಷ್ಣಾ ಮೇಲ್ದಂಡೆ ಯೋಜನೆಗೆ ಬಚಾವತ್ ತೀರ್ಪಿನ ಅನುಸಾರ ಸ್ಕೀಂ–ಎ ಅಡಿಯಲ್ಲಿ 173 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಲು ಅನುವು ಮಾಡಲಾಗಿರುತ್ತದೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಕಾಮಗಾರಿಗಳನ್ನು 2 ಘಟ್ಟಗಳಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಭಾರತ ಸರ್ಕಾರದ ಯೋಜನಾ ಆಯೋಗವು ಎರಡು ಘಟ್ಟಗಳಿಗೆ ಬಂಡವಾಳ ಹೂಡಿಕೆಗೆ ಮಂಜೂರಾತಿ ನೀಡಿರುತ್ತದೆ. ಬರಪೀಡಿತ ಪ್ರದೇಶಗಳಾದ ಬಿಜಾಪುರ, ಬಾಗಲಕೋಟೆ, ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳ ಒಟ್ಟು ಭೂಮಿ 6.22 ಲಕ್ಷ ಹೆಕ್ಟರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ. ಈ ಯೋಜನೆಯಡಿಯಲ್ಲಿ ಪ್ರಮುಖವಾಗಿ 2 ಅಣೆಕಟ್ಟುಗಳನ್ನು ಮತ್ತು ಕಾಲುವೆಗಳ ಜಾಲಗಳನ್ನು ನಿರ್ಮಿಸುವುದು ಒಳಗೊಂಡಿರುತ್ತದೆ.

ಈ ಮೇಲೆ ತಿಳಿಸಿದ 6.22 ಲಕ್ಷ ಹೆಕ್ಟರ್ ನೀರಾವರಿ ಪ್ರದೇಶದಲ್ಲಿ, ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಸುಮಾರು 2.26 ಲಕ್ಷ ಹೆಕ್ಟರ್ ಪ್ರದೇಶ ಒಳಪಟ್ಟಿರುತ್ತದೆ ಅಂದರೆ ಒಟ್ಟಾರೆ ಸ್ಕೀಂ–ಎ ಅಡಿಯಲ್ಲಿ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ನೀರಾವರಿ ಕಲ್ಪಿಸಲು ಉದ್ದೇಶಿಸಿರುವ 2.26 ಲಕ್ಷ ಹೆಕ್ಟರ್ ಪ್ರದೇಶದ ನೀರಾವರಿ ಸೌಲಭ್ಯವನ್ನು ಅಲಮಟ್ಟಿ ಎಡದಂಡೆ ಕಾಲುವೆ, ಆಲಮಟ್ಟಿ ಬಲದಂಡೆ ಕಾಲುವೆ, ಮುಳವಾಡ, ಇಂಡಿ ಮರೋಳ್ ಮತ್ತು ರಾಂಪುರ ಏತ ನೀರಾವರಿ ಯೋಜನೆಗಳಿಂದ ಹಾಗೂ ಇಂಡಿ ಶಾಖಾ ಕಾಲುವೆಯಿಂದ ನೀರಾವರಿಗೆ ಒಳಪಡಲಿದೆ.

ವಿವರಗಳು ಈ ರೀತಿ ಇವೆ.

ಅ. ಬಿಜಾಪುರ ಜಿಲ್ಲೆಯ

1.	ಸಿಂಧಗಿ ತಾ: ನಲ್ಲಿ	85.060 ಹೆಕ್ಟರ್
2.	ಇಂಡಿ ತಾ: ನಲ್ಲಿ	53,269 ಹೆಕ್ಟರ್
3.	ಬಿಜಾಪುರ	8330 ಹೆಕ್ಟರ್
4.	ಮುದ್ದೇಬಿಹಾಳ್	12,103 ಹೆಕ್ಟರ್
5.	ಬಸವನಬಾಗೇವಾಡಿ	19,157 ಹೆಕ್ಟರ್

ಒಟ್ಟು 1.77.919 ಹೆಕ್ಟರ್

ಆ. ಬಾಗಲಕೋಟೆ ಜಿಲ್ಲೆ

1.	ಬಾಗಲಕೋಟೆ	4,145 ಹೆಕ್ಟರ್
2.	ಹುನಗುಂದ	12,055 ಹೆಕ್ಟರ್
3.	ಜಮಖಂಡಿ	5,860 ಹೆಕ್ಟರ್

ಒಟ್ಟು 22060 ಹೆಕ್ಟರ್

ಇ. ಮರೋಳ್ ಏತ ನೀರಾವರಿ ಯೋಜನೆ

1.	ಹುನಗುಂದ ತಾ:	26,700 ಹೆಕ್ಟರ್

ಒಟ್ಟು ಅ+ಆ+ಇ) 2.26.67 ಹೆಕ್ಟರ್

ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಯ ಅನೇಕ ಹಳ್ಳಿ ಹಾಗೂ ಫಲವತ್ತಾದ ಜಮೀನುಗಳು ಅಣೆಕಟ್ಟು ನಿರ್ಮಾಣದಿಂದ ಮುಳುಗಡೆಯಾಗಿರುವ ಪ್ರಯುಕ್ತ, ಸದರಿ ಜಿಲ್ಲೆಗಳ ಎತ್ತರ ಮಟ್ಟದಲ್ಲಿರುವ ಪ್ರದೇಶದ ಜಮೀನುಗಳಿಗೆ ನೀರಾವರಿ ಸೌಲಭ್ಯ ಒದಗಿಸಲು ನೀರನ್ನು ಎತ್ತಬೇಕಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರವು ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿ, ಆರ್ಥಿಕವಾಗಿ ದುಬಾರಿಯಾಗಿದ್ದರೂ ಸಹ ಮೇಲೆ ತಿಳಿಸಿರುವಂತೆ 6 ಬೃಹತ್ ಗಾತ್ರದ ಏತ ನೀರಾವರಿ ಯೋಜನೆಗಳನ್ನು ರೂಪಿಸಿ, ಕಾಮಗಾರಿಗಳನ್ನು ಅನುಷ್ಠಾನಗೊಳಿಸುತ್ತಿದೆ.

ಬಿಜಾಪುರ ಹಾಗೂ ಬಾಲಕೋಟೆ ಅವಳಿ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿನ ಕಾಮಗಾರಿಗಳ ಪ್ರಗತಿಯನ್ನು ಈ ಕೆಳಗೆ ವಿವರಿಸಿದೆ.

ಅ. ಇಂಡಿ ಶಾಖಾ ಕಾಲುವೆ

ಇಂಡಿ ಶಾಖಾ ಕಾಲುವೆಯಡಿಯಲ್ಲಿ ಬಿಜಾಪುರ ಜಿಲ್ಲೆಯಲ್ಲಿ 98.788 ಹೆಕ್ಟರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿರುತ್ತದೆ.

ಆ. ಮುಳುವಾಡಾ ಏತ ನೀರಾವರಿ

ಬಳೂತಿ ಗ್ರಾಮದ ಹತ್ತಿರದಲ್ಲಿರುವ ಮೊದಲನೆಯ ಮುಖ್ಯ ಸ್ಥಾವರ ಹಾಗು ಇದಕ್ಕೆ ಸೇರಿರುವ 5 ಕಿ.ಮೀ. ಉದ್ದದ ಲೀಡ್ ಆಫ್ ಕೇನಾಲ್ ಕಾಮಗಾರಿ ಪೂರ್ಣಗೊಂಡಿದೆ. ಹನುಮಾಪುರ ಹತ್ತಿರದಲ್ಲಿರುವ 2ನೇ ಮುಖ್ಯ ಸ್ಥಾವರದ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಪೂರ್ಣ ಕಾಲುವೆಯ 17.50 ಕಿ.ಮೀ ಹಾಗೂ ಇದರಡಿಯಲ್ಲಿನ ವಿತರಣಾ ಕಾಲುವೆ–1 ರಿಂದ 5ರ ಕಾಮಗಾರಿಗಳ ಪ್ರಗತಿಯು

ವಿವಿಧ ಹಂತದಲ್ಲಿವೆ, ಹಾಗೂ ವಿತರಣಾ ಕಾಲುವೆ 12 ರಿಂದ 24ರ ಕಾಮಗಾರಿಗಳ ಅಂದಾಜು ಪತ್ರಿಕೆ ತಯಾರಿಸಲಾಗಿದ್ದು ಟೆಂಡರ್ ಕರೆಯುವ ಹಂತದಲ್ಲಿದೆ. ಸದರಿ ಯೋಜನೆಯಿಂದ ಬಿಜಾಪುರ ಜಿಲ್ಲೆಯ 30,850 ಹೆಕ್ಟರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ.

ಇ. ಆಲಮಟ್ಟಿ ಎಡದಂಡೆ ಕಾಲುವೆ

ಮುಖ್ಯ ಸ್ಥಾವರದ ಹಾಗೂ ಮುಖ್ಯ ಕಾಲುವೆ ಕಿ.ಮೀ. 1 ರಿಂದ 60ರವರೆಗೆ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಕಿ.ಮೀ. 61 ರಿಂದ 67ವರೆಗೆ ಹಾಗೂ ವಿತರಣಾ ಕಾಲುವೆ–1 ರಿಂದ 27ರ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿರುತ್ತವೆ. ಮುಂದಿನ ರೀಚ್‌ನ ಕಾಮಗಾರಿಗಳು ಟೆಂಡರ್ ಕರೆಯುವ ಹಂತದಲ್ಲಿವೆ. ಈಗಾಗಲೇ ಯೋಜಿತ 20,235 ಹೆಕ್ಟರ್ ಪೈಕಿ 12,652 ಹೆಕ್ಟರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

ಈ. ಆಲಮಟ್ಟಿ ಬಲದಂಡೆ ಕಾಲುವೆ

ಮುಖ್ಯ ಸ್ಥಾವರದ ಕಾಮಗಾರಿ ಪೂರ್ಣಗೊಂಡಿದ್ದು, ಮುಖ್ಯ ಕಾಲುವೆಯ ಕಿ.ಮೀ. 67 ವರೆಗೆ ಹಾಗೂ ವಿತರಣಾ ಕಾಲುವೆ – 1 ರಿಂದ 8 ರಡಿಯ ಕಾಮಗಾರಿಗಳು ಭಾಗಶಃ ಪೂರ್ಣಗೊಂಡಿರುತ್ತವೆ. ವಿತರಣಾ ಕಾಲುವೆ –9 ರಿಂದ 24ರ ವರೆಗಿನ ಕಾಮಗಾರಿಗಳ ಪ್ರಗತಿಯು ವಿವಿಧ ಹಂತದಲ್ಲಿರುತ್ತವೆ. ನಿಗಧಿತ 9,900 ಹೆಕ್ಟೇರ್ ಪೈಕಿ 1,289 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

ಉ. ಇಂಡಿ ಏತ ನೀರಾವರಿ

ಜಾಕ್‌ವೆಲ್ ಕಾಮಗಾರಿಯು ಪ್ರಗತಿಯಲ್ಲಿದ್ದು, ಪಂಪ್ ಅಳವಡಿಕೆ ಕಾಮಗಾರಿಗಳನ್ನು ಇತ್ತೀಚೆಗೆ ಟೆಂಡರ್ ಆಧಾರದ ಮೇಲೆ ವಹಿಸಿಕೊಡಲಾಗಿರುತ್ತದೆ. ಮುಖ್ಯ ಕಾಲುವೆಯ ಕಿ.ಮಿ. 0 ರಿಂದ 5ರ ವರೆಗಿನ ಕಾಮಗಾರಿಗಳು ಭಾಗಶಃ ಪೂರ್ಣಗೊಂಡಿರುತ್ತದೆ. ವಿತರಣಾ ಕಾಲುವೆ–1ರಿಂದ 29ರ ವರೆಗೆ ಹಾಗೂ ಮುಖ್ಯ ಕಾಲುವೆ ಕಿ.ಮಿ 5 ರಿಂದ 96ರ ವರೆಗೆ ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿದ್ದು, ವಿತರಣಾ ಕಾಲುವೆ 30 ರಿಂದ 40ರ ಕಾಮಗಾರಿಗಳಿಗಾಗಿ ಅಂದಾಜು ಪತ್ರಿಕೆ ತಯಾರಿಸಲಾಗಿದ್ದು, ಟೆಂಡರ್ ಕರೆಯುವ ಹಂತದಲ್ಲಿದೆ. ಸದರಿ ಯೋಜನೆಯಿಂದ ಬಿಜಾಪುರ ಜಿಲ್ಲೆಯ 37,900 ಹೆಕ್ಟರ್ ಪ್ರದೇಶವನ್ನು ನೀರಾವರಿಗೆ ಒಳಪಡಿಸಲಾಗುವುದು.

ಊ. ಮರೋಳ್ (ರಾಮಥಾಳ್) ಏತ ನೀರಾವರಿ

ಸದರಿ ಯೋಜನೆಯಿಂದ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ 26,200 ಹೆಕ್ಟರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ. ಸದರಿ ಯೋಜನೆಯ ಸರ್ವೆ, ತನಿಖಾ ಕಾರ್ಯ, ವಿನ್ಯಾಸ ಮತ್ತು ಕಾಮಗಾರಿಯ ಅಂದಾಜು ಪತ್ರಿಕೆ ತಯಾರಿಸುವ ಕೆಲಸ ಪ್ರಗತಿಯಲ್ಲಿದೆ. ನಿಗಮದ ತಾಂತ್ರಿಕ ಉಪಸಮಿತಿಯ ಸದಸ್ಯರು ಸಹಾ ಯೋಜನೆಯ ಜಾಕ್‌ವೆಲ್ ನಿರ್ಮಾಣ ಕುರಿತು ಸ್ಥಳ ಪರಿವೀಕ್ಷಣೆ ಕೈಗೊಂಡಿರುತ್ತಾರೆ. ಶೀಘ್ರದಲ್ಲಿ ಜಾಕ್‌ವೆಲ್ ಕಾಮಗಾರಿಗಾಗಿ ಟೆಂಡರ್ ಕರೆಯಲಾಗುವುದು.

ಈಗಾಗಲೇ, ಕೃಷ್ಣಾ ಮೇಲ್ದಂಡೆ ಯೋಜನೆಗೆ ಖರ್ಚಾಗಿರುವ ಸುಮಾರು 7,812 ಕೋಟಿ ರೂಪಾಯಿಗಳಲ್ಲಿ, ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ನೀರಾವರಿ ಕಾಮಗಾರಿಗಳಿಗೆ ಸುಮಾರು

1,604 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

ಕರ್ನಾಟಕ ಮತ್ತು ಕೃಷ್ಣಾ ಕಣಿವೆಯ ಇನ್ನುಳಿದ ಎರಡು ರಾಜ್ಯಗಳಾದ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ರಾಜ್ಯಗಳು ತಮ್ಮ ಕೇಂದ್ರ ಸರ್ಕಾರಕ್ಕೆ ಅಹವಾಲುಗಳು ಸಲ್ಲಿಸಿದ ಹಿನ್ನೆಲೆಯಲ್ಲಿ, ದಿನಾಂಕ: 2/4/2004ರ ಕೇಂದ್ರ ಸರ್ಕಾರದ ಅಧಿಸೂಚನೆಯಲ್ಲಿ 'ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣವನ್ನು ರಚಿಸಲಾಗಿರುತ್ತದೆ

ಹೊಸದಾಗಿ ರಚಿತಗೊಂಡಿರುವ ನ್ಯಾಯಾದಿಕರಣದ ನ್ಯಾಯಾಧೀಶರುಗಳ ವಿವರಗಳು ಕೆಳಗಿನಂತಿದೆ.

1. ಶ್ರೀ ಜಸ್ಟೀಸ್ ಬ್ರಿಜೇಸ್ ಕುಮಾರ್ ಅಧ್ಯಕ್ಷರು
   ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು
2. ಶ್ರೀ ಜಸ್ಟೀಸ್ ಎಸ್.ಪಿ. ಶ್ರೀವಾತ್ಸವ ಸದಸ್ಯರು
   ಅಲಹಬಾದ್ ಉಚ್ಚನ್ಯಾಯಾಲಯದ ನ್ಯಾಯಾಧೀಶರು
3. ಶ್ರೀ ಜಸ್ಟೀಸ್ ಡಿ.ಕೆ. ಸೇತ್ ಸದಸ್ಯರು
   ಕಲಕತ್ತ ಉಚ್ಚನ್ಯಾಯಾಲಯದ ನ್ಯಾಯಾಧೀಶರು

ಕೃಷ್ಣಾ ನದಿಯಲ್ಲಿ ರಾಜ್ಯಕ್ಕೆ ಸ್ಕೀಮ್–ಬಿ ಅಡಿಯಲ್ಲಿ ಲಭ್ಯವಿರುವ ನೀರಿನ ಪ್ರಮಾಣವನ್ನು ಹಂಚಿಕೆ ಮಾಡಲು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಸಲ್ಲಸಿದ್ದ ದೂರಿನಲ್ಲಿ ಕೋರಿರುತ್ತದೆ. ಈ ನ್ಯಾಯಾಧಿಕರಣ ಮುಂದೆ ಕರ್ನಾಟಕ ರಾಜ್ಯವು ಕೃಷ್ಣಾ ಕಣಿವೆಯಲ್ಲಿ ಲಭ್ಯವಾಗುವ ಹೆಚ್ಚುವರಿ ನೀರಿನಲ್ಲಿ ಪಾಲನ್ನು ಕೇಳಲು ಸಿದ್ದತೆಗಳನ್ನು ಮಾಡಿಕೊಳ್ಳುತ್ತಿದೆ.

ಹೊಸದಾಗಿ ರಚಿತವಾಗಿರುವ ಕೃಷ್ಣಾ ನ್ಯಾಯಾಧಿಕರಣವು ದಿನಾಂಕ: 19/11/2004ರಂದು ಅದರ ಒಂದು ಅಂತರಿಕ ಸಭೆಯನ್ನು ನಡೆಸಿರುತ್ತದೆ. ಕಣಿವೆ ರಾಜ್ಯಗಳನ್ನು ಕರೆದು ಸಭೆಯನ್ನು ನಡೆಸುವ ಪ್ರಕ್ರಿಯೆ ಇನ್ನೂ ಪ್ರಾರಂಭವಾಗಿರುವುದಿಲ್ಲ.

ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ನಿನ್ನೆ ದಿವಸ ಒಂದು ಕಡೆ ಆ ಮನೆಯಲ್ಲಿ ಹೇಳಿದ್ದೇನೆ. ನಾವು ಎರಡನೇ ಟ್ರಿಬ್ಯೂನಲ್‌ಗೂ ಕೂಡ ಶ್ರೀಮಾನ್ ನಾರಿಮನ್ ಅವರಿಗೆ ಕೇಳಿಕೊಂಡಿದ್ದೇವೆ. ಅವರು ಈ ಕೇಸನ್ನು ನಾನು ನಡೆಸಿಕೊಡುತ್ತೇನೆಂದು ಹೇಳಿದ್ದಾರೆ. ಹಾಗೂ ಅವರು ಒಪ್ಪಿಕೊಂಡಿದ್ದಾರೆ. ಲಾ ಮಿನಿಸ್ಟರ್‌ರವರು ಕೂಡ ಪತ್ರವನ್ನು ಬರೆದು ನೀವು ಒಪ್ಪಿಕೊಳ್ಳಬೇಕೆಂದು ಈಗಾಗಲೇ ಅವರಿಗೆ ತಿಳಿಸಿದ್ದಾರೆ. ಹೀಗೆ ನಮ್ಮ ಪ್ರಯತ್ನಗಳು ಜಾರಿಯಲ್ಲಿ ಇವೆ. ಮತ್ತು ಈ ದಿಕ್ಕಿನಲ್ಲಿ ಸರ್ಕಾರ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ. ಬಿಜಾಪುರ ಭಾಗದಲ್ಲಿ ಯಾವ ಯಾವ ಕೆಲಸಗಳನ್ನು ಮಾಡಬೇಕೆಂದು ಅಪ್ರೂವ್ ಆಗಿವೆ ಯಾವ ಯಾವ ಕೆಲಸವನ್ನು ಮಾಡಿ ನಾವು ನೀರನ್ನು ಕೊಡುತ್ತೇವೆಂದು ಹೇಳಿದ್ದೇವೆ ಅಥವಾ ಎಷ್ಟು ಹೆಕ್ಟೇರ್ ನೀರಾವರಿ ಮಾಡಬೇಕೆಂದು ನಮ್ಮ ಉದ್ದೇಶ ಇದೆ ಅವುಗಳು ಹತ್ತಾರು ವರ್ಷದಿಂದ ನಡೆದುಕೊಂಡು ಬಂದಂತಹ ಎಲ್ಲಾ ಸ್ಕೀಮ್‌ಗಳು ಯಥಾಸ್ಥಿತಿಯಲ್ಲಿ ಇವೆ. ಯಥಾಸ್ಥಿತಿಯಲ್ಲಿ ಎಂದರೆ ಅವುಗಳು ಕಂಟಿನ್ಯೂ ಆಗಿ ಅದರಲ್ಲಿ ಯಾವ ಕಡಿತವಾಗಿಲ್ಲ. ಆದರೆ ನಾನು ಸ್ಪಷ್ಟವಾಗಿ ಹೇಳುತ್ತೇನೆ, ಕೆಲವು ಜನರು ಅಲ್ಲಿ ತಪ್ಪು ಅಭಿಪ್ರಾಯ ಮತ್ತು ತಪ್ಪು ಕಲ್ಪನೆ ಕೊಡತಕ್ಕಂಥ ಪ್ರಯತ್ನ ಮಾಡುತ್ತಿದ್ದಾರೆ, ಅದೇನೆಂದರೆ ಜೇವರ್ಗಿ ಭಾಗದಲ್ಲಿ ಒಂದು ಏತ ನೀರಾವರಿ

ಯೋಜನೆ ತೆಗೆದುಕೊಳ್ಳಬೇಕೆನ್ನುವಂತಹ ಪ್ರಸ್ತಾವನೆ ಹೋದ ಸಲ ಬಜೆಟ್‌ನಲ್ಲಿ ಬಂತು. ಅದಕ್ಕೆ ಇಲ್ಲಿನ ಎಲ್ಲಾ ನೀರನ್ನು ಜೇವರ್ಗಿ ಭಾಗಕ್ಕೆ ಮಾನ್ಯ ಮುಖ್ಯಮಂತ್ರಿಗಳು ಒಯ್ಯುತ್ತಿದ್ದಾರೆ ಎಂದು ಒಂದು ಅಪಪ್ರಚಾರವನ್ನು ಕೆಲವು ಜನರು ಮಾಡುತ್ತಿದ್ದಾರೆ. ಅದು ಸತ್ಯಕ್ಕೆ ದೂರವಾದುದು. ಅದಕ್ಕೆ ಯಾವುದಕ್ಕೂ ಅವಕಾಶ ಕೊಡುವುದಿಲ್ಲ. ಮೊದಲ ಆದ್ಯತೆ ಬಿಜಾಪುರ ಮತ್ತು ಬಾಗಲಕೋಟೆ ಜನರಿಗೆ ಕೊಟ್ಟ ಮೇಲೆ ಉಳಿದಂತಹ ಪ್ರಶ್ನೆ ಉದ್ಭವಿಸುತ್ತದೆ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಇನ್ನು "ಬಿ" ಸ್ಕೀಮ್‌ನಲ್ಲಿ ಎಷ್ಟು ನೀರು ಉಳಿಯುತ್ತದೆ ಎಷ್ಟು ನೀರು ಕೊಡಬೇಕು ಎನ್ನುವುದನ್ನು ನಾವು ಈಗೊಂದು ಕಲ್ಪನೆ ಇಟ್ಟುಕೊಂಡರೂ ಕೂಡ ಅದು ಕಾಗದದ ಮೇಲೆ ಇರತಕ್ಕಂಥ ಅಲಾಟ್‌ಮೆಂಟ್. ಅದಕ್ಕೆ ಮುಂದೆ ನಾವು ಟ್ರಿಬ್ಯೂಲ್‌ನಲ್ಲಿ ಅಂತಿಮವಾಗಿ ಏನು ನಮಗೆ ನೀರು ಸಿಗುತ್ತದೋ ಅದರ ಪ್ರಕಾರ ಹಂಚಿಕೆಯಾಗಿ, 2ನೆ ಹಂತದಲ್ಲಿ ಆ ಕೆಲಸ ಪ್ರಾರಂಭವಾಗುತ್ತದೆ. ಈಗ ನಾವು ಕೃಷ್ಣಾದಲ್ಲಿ 'ಎ' ಸ್ಕೀಮ್‌ನಲ್ಲಿ ಏನು ಕೆಲಸಗಳನ್ನು ತೆಗೆದುಕೊಂಡಿದ್ದೇವೆ ಅದು ಯಾವುದೂ ಕೂಡ ನೀರು ಕಡಿತ ಮಾಡಿಲ್ಲ ಮತ್ತು ನೀರಾವರಿ ಆಗತಕ್ಕಂಥ ಏರಿಯಾವನ್ನೂ ಕೂಡ ಕಡಿತ ಮಾಡಿಲ್ಲ. ಅಲ್ಲಿ ಎಷ್ಟು ಹೆಕ್ಟೇರ್ ನೀರಾವರಿ ಮಾಡಬೇಕೆಂದು ಈಗಾಗಲೇ ನಾವು ಹೇಳಿದ್ದೇವೆ. ಅಲ್ಲಿ 2,26,000 ಹೆಕ್ಟೇರ್‌ಗೆ ನೀರಾವರಿ ಮಾಡಬೇಕೆಂದು ಹೇಳಿ ನಮ್ಮ ಅನಿಸಿಕೆ ಇದೆ. ಮತ್ತು ಈಗಾಗಲೇ ಅದರ ಬಗ್ಗೆ ಕಾರ್ಯವನ್ನು ರೂಪಿಸಿದ್ದೇವೆ. ಆ ದಿಕ್ಕಿನಲ್ಲಿ ಏನೇ ಬರಲಿ ಎಷ್ಟು ಹಣ ಬೇಕಾಗುತ್ತದೆ, ಆ ಹಣವನ್ನು ಖರ್ಚು ಮಾಡುವುದಕ್ಕೆ ನಾವು ಸಿದ್ಧವಿದ್ದೇವೆ. ಈ ಮಾತನ್ನು ನಾನು ಹೇಳಿದ್ದೇನೆ. 4 ಲಿಫ್ಟ್ ಇರಿಗೇಷನ್ ಯೋಜನೆ ಇದೆ. ಅದು ಅನ್‌ಎಕಾನಿಮಿಕಲ್ ಇದ್ದರೂ ಕೂಡ ಯಾವ ಭಾಗ ಅತ್ಯಂತ ಬರಪೀಡಿತ ಆಗಿದೆ ಆ ಬರಪೀಡಿತ ಪ್ರದೇಶಕ್ಕೆ ನೀರು ಕೊಡಬೇಕು ಎನ್ನುವ ಒಂದೇ ಉದ್ದೇಶದಿಂದ ಅದು ಅನ್‌ಎಕಾನಿಮಿಕಲ್ ಪ್ರಾಜೆಕ್ಟ್ ಇದ್ದರೂ ಕೂಡ, ಎಕಾನಾಮಿಕಲಿ ವಯಬಲ್ ಇಲ್ಲದೆ ಇದ್ದರೂ ಕೂಡ ಹೆಚ್ಚಿನ ಹಣ ಖರ್ಚಾಗಿ ದುಬಾರಿಯಾದರೂ ಕೂಡ ಆ ಕೆಲಸವನ್ನು ಮಾಡಬೇಕೆಂದು ಹೇಳಿ ತೀರ್ಮಾನ ತೆಗೆದುಕೊಂಡು ಈ ಕೆಲಸ ಈಗಾಗಲೇ ನಡೆದಿದೆ. ಕೆಲವು ಟೆಂಡರ್ ಕಾಲ್‌ಫರ್ ಮಾಡುವಂತಹ ಹಂತದಲ್ಲಿದೆ. ಅವೆಲ್ಲವನ್ನೂ ಕೂಡ ನಾವು ಮುಗಿಸಿಕೊಡುತ್ತೇವೆಂದು ನಾನು ಹೇಳಿದ್ದೇನೆ. ಅದಲ್ಲದೆ ಅಪ್ಪರ್ ಕೃಷ್ಣಾ ಯೋಜನೆಗಳೇನಿವೆ ಅವುಗಳನ್ನು ಡಿಸೆಂಬರ್ 2005ರಲ್ಲಿ ಮುಗಿಸುತ್ತೇವೆಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ನಾನೂ ಕೂಡ ಹೇಳಿದ್ದೇನೆ. ಮಾನ್ಯ ಸಿದ್ದರಾಮಯ್ಯನವರೂ ಕೂಡ ಇದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದಾರೆ.

ಮಾನ್ಯ ಸದಸ್ಯರು: ಕೆರೆಗಳಿಗೆ ನೀರು ಕೊಡುವ ಬಗ್ಗೆ ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಡಿಫನೇಟಲಿ, ಇದು ಫೀಸಿಬಲ್ ಇದ್ದರೆ ಕೆರೆಗೂ ನೀರು ಕೊಡಿಸುತ್ತೇವೆ. ಏಕೆಂದರೆ ಈಗಾಗಲೇ ಮಾನ್ಯ ಮಾಧುಸ್ವಾಮಿಯವರು ಮಾತನಾಡಿದರು. ತುಮಕೂರಿನಲ್ಲಿ ತಮಗೆ ಗೊತ್ತಿದ್ದ ಹಾಗೆ ಹೇಮಾವತಿಯಿಂದಲೇ ತುಂಬಿಕೊಳ್ಳುತ್ತಿದ್ದಾರೆ. ಹಾಗೆ ಇಲ್ಲೂ ಫೀಜೆಬಲ್ ಇದ್ದರೆ ಮತ್ತು ಆ ಅಚ್ಚುಕಟ್ಟಿನಲ್ಲಿ ಬಂದು ಇನ್ನೊಬ್ಬರಿಗೆ ತೊಂದರೆ ಆಗದ ಹಾಗೆ ಇದ್ದರೆ ಖಂಡಿತವಾಗಿ ಆ ಕೆಲಸವನ್ನು ಕೂಡ ಮಾಡಿಸಿಕೊಡುತ್ತೇವೆ. ಆದರೆ ಇದಕ್ಕೆ ರಾಜಕೀಯ ಮಾಡುವಂಥಾದ್ದು ಬೇಡ. ಏಕೆಂದರೆ ನಿಮ್ಮ, ನಮ್ಮ ಹಾಗೂ ಎಲ್ಲರ ಉದ್ದೇಶ ಏನು, ಕೃಷ್ಣ ಬಚಾವತ್ ಅವಾರ್ಡ್‌ನಲ್ಲಿ ಏನು ನಮಗೆ 734 ಟಿಎಂಸಿ ಎಂದು ಅಲೋಕೇಷನ್ ಆಗಿದೆ ಆ ನೀರಿನ

ಬಳಕೆಯನ್ನು ಮಾಡಿಕೊಳ್ಳಬೇಕು ಎಂಬುದಾಗಿದೆ. ಅದರಲ್ಲಿ ಅಡತಡೆಗಳು ಇದ್ದರೂ ಕೂಡ ನಾವು ಇಲ್ಲಿ ಅದನ್ನು ಬಗೆಹರಿಸಿಕೊಳ್ಳದೇ ಹೊರತು ಬಹಿರಂಗವಾಗಿ ಅದರ ಬಗ್ಗೆ ಎಲ್ಲರೂ ಹೇಳಿಕೆಯನ್ನು ಕೊಟ್ಟುಕೊಂಡು ಹೋದರೆ ಬಹಳ ಕಷ್ಟವಾಗುತ್ತದೆ. ಏಕೆಂದರೆ ಇದೇ ಸ್ಟೇಟ್‌ಮೆಂಟ್ ನಾಳೆ ಟ್ರಿಬ್ಯೂನಲ್ ಮುಂದೆ ನಮಗೆ ಆಗದಂತವರು ಆಂಧ್ರದವರು ಇರಬಹುದು ಅಥವಾ ಮಹಾರಾಷ್ಟ್ರದವರು ಇರಬಹುದು, ಅದನ್ನು ನೋಡಿ ಇಂಥಾದ್ದು ಉಪಯೋಗ ಮಾಡಿದ್ದಾರೆ, ಇಂತಾದ್ದು ಉಪಯೋಗ ಮಾಡಿಲ್ಲ ಎಂದು ಹೇಳಬಹುದು ಅಥವಾ ಇಂತಾದ್ದು ನಿಂತುಹೋಗಿದೆ ಎಂದು ಹೇಳಬಹುದು. ನಾನೊಬ್ಬನೇ ಅಲ್ಲ, ನಾನು ಮಂತ್ರಿಯಾಗಿ 8–9 ತಿಂಗಳು ಆಗಿರಬಹುದು, ಆ 9 ತಿಂಗಳಲ್ಲಿ ಎಲ್ಲಾ ಕೆಟ್ಟು ಹೋಗಿಲ್ಲ, 9 ತಿಂಗಳಲ್ಲಿ ಎಲ್ಲಾ ನಿಂತು ಹೋಗಿಲ್ಲ. ಆದರೆ ನಮಗಿಂತ ಹಿಂದೆ ಇರತಕ್ಕಂಥ ಅನೇಕ ಮಂತ್ರಿಗಳು, ಮುಖ್ಯಮಂತ್ರಿಗಳು ಹಾಗೂ ನೀವೆಲ್ಲರೂ ಸಹಕಾರ ಕೊಟ್ಟಿದ್ದಕ್ಕೆ ಈ ಹತ್ತಿಪ್ಪತ್ತು ವರ್ಷದಲ್ಲಿ ಸಾಧನೆಯನ್ನು ಮಾಡಿದ್ದೇವೆ ಹಾಗೂ ಇನ್ನೂ ಮಾಡತಕ್ಕಂಥಾದ್ದು ಇದೆ. ಆದರೆ ಒಂದು ಬಿಜಾಪುರ ಜನತೆ ಏನು ವಿಶೇಷವಾಗಿ ಅದರಲ್ಲೂ ಅಲ್ಲಿನ ಎಂಪಿ ಅವರ ತಲೆಯಲ್ಲಿ ಏಕೆ ಬಂತೋ ಗೊತ್ತಿಲ್ಲ. ಅವರ ತಲೆಯೊಳಗೆ ಇದನ್ನು ಯಾರು ಕಲ್ಪನೆ ಕೂರಿಸಿದ್ದಾರೋ ಗೊತ್ತಿಲ್ಲ. ಮತ್ತೆ ದಿನಾ ಅವರು ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡುತ್ತಾರೆ. ಏನು ಸಮಸ್ಯೆ ಇದೆ ಅಲ್ಲಿ ಏನಿಲ್ಲ ಎಂಬ ಬಗ್ಗೆ ಅವರು ಇವರು ಮಾತನಾಡಿ ತಪ್ಪು ತಿಳುವಳಿಕೆಯನ್ನು ಬಗೆಹರಿಸತಕ್ಕಂಥ ಪ್ರಯತ್ನ ಕೂಡ ಮಾಡಿದ್ದಾರೆ. ಆದರೆ ದುರ್ದೈವ ಇನ್ನು ಅಲ್ಲಿ ಸತ್ಯಾಗ್ರಹ ಕಂಟಿನ್ಯೂ ಮಾಡುತ್ತಿದ್ದಾರೆ. ನಾನು ಸದನದ ಮುಖಾಂತರ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ, ಏಕೆಂದರೆ ಇವತ್ತು ನಾವು ಈ ಸದನದಲ್ಲಿ ಹೇಳಿಕೆಯನ್ನು ಕೊಡುವುದು ಬಿಟ್ಟು, ಸದನದಲ್ಲಿ ಇರತಕ್ಕಂಥ ಮುಖಂಡರನ್ನು ಬಿಟ್ಟು .....

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ದಯವಿಟ್ಟು ಅವಕಾಶ ಕೊಡಿ. ಈ ಸಮಸ್ಯೆ ಬಗೆಹರಿಯುವುದಕ್ಕೆ ನೀವು ಮಾಡಬೇಕಾದಂತಹ ಒಂದು ಕೆಲಸ ಎಂದರೆ ನೀವು ಅಲ್ಲಿಗೆ ಹೋಗಿ ಬನ್ನಿ, ಅಲ್ಲಿ ಅವರನ್ನು ಭೇಟಿ ಮಾಡಿ, ಇದೇ ಅಶ್ಯೂರೆನ್ಸ್ ಕೊಡಿ. ಏಕೆಂದರೆ ಇದನ್ನು ಪ್ರೆಸ್ಟೀಜ್ ಆಗಿ ತೆಗದುಕೊಳ್ಳಬೇಡಿ. ನಾನು ಅದನ್ನು ಪ್ರೆಸ್ಟೀಜ್ ಆಗಿ ತೆಗೆದುಕೊಂಡೇ ಇಲ್ಲ. ಈಗೇನು ನಿನ್ನೆ ಮೊನ್ನೆ ಆಗಿರುವ ಬೆಳವಣಿಗೆಯಲ್ಲಿ ಅಲ್ಲಿ ಹೋಗಿ ಸಾಂತ್ವಾನ ಹೇಳಿ, ಅಲ್ಲಿ ಅವರಿಗೆ ಭರವಸೆ ಕೊಟ್ಟು ಬಂದರೆ ಸಾಕು. ಮಾನ್ಯ ಮುಖ್ಯಮಂತ್ರಿಗಳು ಬೇಡ, ನೀವು ಹೋಗಿ ಬಂದರೆ ಸಾಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಈಗ ಸದನ ನಡೆದಿದೆ, ನಿಮದೂ, ನಮ್ಮದೂ ಜವಾಬ್ದಾರಿ ಇದೆ. ಸದನ ನಡೆದಾಗ ಸದನದಲ್ಲಿ ಹೇಳುವುದು ಬಿಟ್ಟು ಸದನದ ಹೊರಗಡೆ ಸೆಟ್ಲಮೆಂಟ್ ನಾವು ಮಾಡಿಕೊಳ್ಳಬೇಕೆಂದರೆ ಇದು ತಪ್ಪಾಗುತ್ತದೆ. ಯಾವುದೇ ಸರ್ಕಾರ ಇರಲಿ ನಾಳೆ ನೀವೇ ಮಾನ್ಯ ಮುಖ್ಯಮಂತ್ರಿಗಳಾದರೂ ಕೂಡ ಜನಪ್ರತಿನಿಧಿಗಳು ಬಂದು ಸರ್ಕಾರದ ಮುಂದೆ ಹೇಳಬೇಕೆ ಹೊರತು ನಾನು ಕರೆದಲ್ಲಿ ನೀನೇ ಬಾ ಎನ್ನುವ ಪ್ರತಿಷ್ಟೆ ಏನು? ನಿಮ್ಮ ಮಾತು ನಾವು ಕೇಳುವುದಿಲ್ಲಾ? ನೀವು ಮೀಟಿಂಗ್ ಕರೆಸಿ ಎಂದರೆ ಕರೆಸುತ್ತೇವೆ, ನೀವು ಏನು ಹೇಳುತ್ತೀರಿ ಅದನ್ನು ಕೇಳುತ್ತೇವೆ ಆಗುವುದಿದ್ದರೆ ಆಗುತ್ತದೆಂದು ಹೇಳುತ್ತೇವೆ, ಇಲ್ಲವೆಂದರೆ ಇಲ್ಲವೆಂದು ಹೇಳುತ್ತೇವೆ. ಇದಕ್ಕೆ ಪ್ರತಿಷ್ಠೆ ಮಾಡತಕ್ಕಂಥ ಪ್ರಶ್ನೆಯಲ್ಲ. ಈಗ ಬಾಗಲಕೋಟೆಯ ಜನರಿಗೆ, ನಮ್ಮ ಪ್ರಕಾಶರವರು ಹೇಳಿದ ಮೇಲೂ ಕೂಡ ಇಲ್ಲಿ ಬಂದಾಗ ನಾವು ಒಂದು ಸಭೆಯನ್ನು ನಡೆಸಿ ಎಲ್ಲರಿಗೂ ಏನಾಗಬಹುದು, ಏನು ಮಾಡಬಹುದು,

ಏನು ಮಾಡುವುದಕ್ಕಾಗುವುದಿಲ್ಲ, ಈಗ ಸಧ್ಯದಲ್ಲಿ ಯಾವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬಹುದು ಎನ್ನುವುದನ್ನು ಸ್ಪಷ್ಟವಾಗಿ ಹೇಳಿದ ಮೇಲೆ ತಮ್ಮ ಬಾಗಲಕೋಟೆ ಶಾಸಕರು ಥ್ಯಾಂಕ್ಸ್ ಹೇಳಿ ಪತ್ರ ಬರೆದಿದ್ದಾರೆ. ಅದೇನೆಂದರೆ ತಾವು ಒಳ್ಳೆಯ ಕೆಲಸ ಮಾಡಿದಿರಿ. ಮೊನ್ನೆ ಕರೆದು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದೀರಿ, ಆದಷ್ಟು ಬೇಗ ಮಾಡಿ, ಆದರೆ ಇನ್ನು ಎರಡು ಕೆಲಸಗಳು ಇವೆ ಅದನ್ನು ಸರಿಪಡಿಸಿರಿ ಎಂದು ನನ್ನ ಹತ್ತಿರ ಇವತ್ತು ಪತ್ರ ತಂದುಕೊಟ್ಟರು. ಇದು ಇನ್ನು ಅನೇಕ ಸಮಸ್ಯೆಗಳನ್ನು ಬಗೆಹರಿಸತಕ್ಕಂಥಾದ್ದು ಇದೆ. ಇಲ್ಲಿ ಬಂದಿರತಕ್ಕಂಥ ಸಮಸ್ಯೆ ಹೇಗೆ ಬಗೆಹರಿಸುತ್ತೇವೆ ಎಂದು ಹೇಳುತ್ತೇನೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಇಲ್ಲಿ ಉಪ ಮುಖ್ಯಮಂತ್ರಿಗಳು ಇರುತ್ತಾರೆ, ಹಣಕಾಸಿನ ಮಂತ್ರಿಗಳು ಇರುತ್ತಾರೆ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ತಾವೂ ಇರುತ್ತೀರಿ, ಫ್ಲೋರ್ ಲೀಡರ್ಸ್ ಇರುತ್ತಾರೆ, ಇಲ್ಲಿ ಸಂಶಯ ಏನಿದೆ, ನಾಳೆ ಸಂಶಯಕ್ಕೆ ಈಡಾಗಬಾರದು. ನಾನು ಅಲ್ಲಿ ಹೋದಮೇಲೆ ನೀವು ಹೇಗೆ ಹೇಳಿದಿರಿ, ಇದನ್ನು ಒಪ್ಪಿಕೊಂಡಿಲ್ಲ, ಅದನ್ನು ಒಪ್ಪಿಕೊಂಡಿಲ್ಲ ಹೀಗೆ ನೀವು ಭೇಜಾರು ಮಾಡಿಕೊಳ್ಳಬೇಡಿ, ಒಂದೊಂದು ಪಕ್ಷಗಳು ಒಂದೊಂದು ಕಡೆ ಸತ್ಯಾಗ್ರಹಕ್ಕೆ ಕುಳಿತಾಗ ನಾವೆಲ್ಲರೂ ಕೂಡ ಹೋಗಬೇಕೆಂದು ಹೇಳುವುದು ಇದು ಯಾವ ನ್ಯಾಯ? ನಾನು ಹೋಗಬಾರದು ಎಂದು ಹೇಳುವುದಿಲ್ಲ. ಆದರೆ 16ನೇ ತಾರೀಖಿಗೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಸಲಹೆ ಮೇರೆಗೆ ಇಲ್ಲಿ ಒಂದು ಮೀಟಿಂಗ್ ಕರೆದಿದ್ದಾರೆ. ಆ ಮೀಟಿಂಗ್‌ನಲ್ಲಿ ಅವರು ಭಾಗವಹಿಸಲಿ. ಬೇಕಾದರೆ ಇನ್ನು ಅದನ್ನು ಫ್ರಿಫೋನ್ ಮಾಡೋಣ. ನೀವು, ನಾವು ಕುಳಿತು ಕೆಲಸವಾಗುವಂಥಾದ್ದು ಬಹಳ ಮುಖ್ಯವಾದದ್ದು; ಏನು ಕೆಲಸವಾಗಬೇಕೋ, ಅದಕ್ಕೆ ನಮ್ಮೆಲ್ಲರ ಸಹಕಾರವಿದೆ. ಅದಕ್ಕೆ ಏನು ಮಾಡಬೇಕೆಂಬುದನ್ನು ನೀವು ಹೇಳಿ, ಅದಕ್ಕೆ ನಾವೆಲ್ಲರೂ ಸಿದ್ದರಿದ್ದೇವೆ. ಅಲ್ಲಿನ ಮುಖಂಡರಿಗೆ ಎಷ್ಟು ಕಳಕಳಿ ಇದೆಯೋ, ತಮಗೆ, ಇದೆ, ಅಷ್ಟೇ ಕಾಳಜಿ, ಕಳಕಳಿ ನಮಗೂ ಕೂಡ ಇದೆ. ನಮಗೆ ಕೆಲವು ತಿಳಿಯದೇ ಇರಬಹುದು, ಆದರೆ ಅದನ್ನು ನಮಗೆ ಕ್ಲಾರಿಫೈ ಮಾಡಿಕೊಟ್ಟು, ಅದನ್ನು ತಿಳಿಸಿ ಹೇಳುವಂಥ ರೀತಿಯಲ್ಲಿ ಹೇಳಿದರೆ ಇದು ಇಲ್ಲ, ನಿಮಗೆ ಅರ್ಥವಾಗುತ್ತಿಲ್ಲ, ಇದು ಈ ರೀತಿಯಾಗಿದೆಯೆಂದು ತಿಳಿಸಿದರೆ, ಖಂಡಿತವಾಗಿಯೂ ನಾವು ಅದನ್ನು ಸ್ವೀಕರಿಸುತ್ತೇವೆ. ನಾವು ಸ್ವೀಕರಿಸುವುದಿಲ್ಲವೆಂದು, ಹೇಳಿ, ನಾವು ಅದರ ಮೇಲೆ ಪ್ರೆಸ್ಟೇಜ್ ಇಷ್ಯೂ ಮಾಡಿಲ್ಲ. ನಾವು ಆ ರೀತಿ ಪ್ರೆಸ್ಟೇಜ್ ಇಷ್ಯೂ ಮಾಡುವುದಿಲ್ಲ. ಏಕೆಂದರೆ ಇದು ಕರ್ನಾಟಕದ ಜನತೆಯ ಅಳಿವು, ಉಳುವಿನ ಪ್ರಶ್ನೆಯಾಗಿದೆ. ಇದು ನೀರಿನ ಬಳಕೆಯ ಪ್ರಶ್ನೆ ಇವತ್ತು ಏನಾಗಿದೆಯೆಂದರೆ ಇಡೀ ಪ್ರಪಂಚದಲ್ಲೇ, ನೀರು ಬಂಗಾರಕ್ಕಿಂತಲೂ ಹೆಚ್ಚಿನ ಕಿಮ್ಮತ್ತಿನದ್ದು ಆಗಿದೆ. ಈ ಬಂಗಾರವನ್ನು ಅಲ್ಲಿ, ಇಲ್ಲಿ ದುಡ್ಡು ಕೊಟ್ಟರೆ ಸಿಗಬಹುದು. ಆದರೆ ನೀರು ಮಾತ್ರ ಪ್ರಪಂಚದಲ್ಲೇ ಸ್ಕೇರ್ ಆಗುತ್ತಾ ಇದೆ. ಅದೇ ರೀತಿಯ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಉದ್ಭವಿಸಿದೆ. ಅದಕ್ಕಾಗಿಯೇ, ಈ ಕುಡಿಯುವ ನೀರಿಗಾಗಿ ಎಷ್ಟು ಗಲಾಟೆಯಾಯಿತು. ಇದನ್ನು ಯಾವ ರೀತಿ ಮಾಡಬೇಕು. ಏನು ಮಾಡಬೇಕು ಎಂದು ಆಗಿ ಕೊನೆಗೆ ಶಾಸಕರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಕುಡಿಯುವ ನೀರಿಗಾಗಿ ಮಾಡುವ ತನಕ ಆಯಿತು. ಕಳೆದ ಮೂರು ವರ್ಷಗಳಿಂದ ಬರಗಾಲದ ಪರಿಸ್ಥಿತಿ ಇದ್ದಾಗ, ಕೂಡ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿಯಾಗಿರಲಿಲ್ಲ. ಆದರೆ ಇವತ್ತು ಆ ಒಂದು ಪರಿಸ್ಥಿತಿ ನಮಗೆ ಏಕೆ ಅನಿಸುತ್ತಿದೆಯೆಂದರೆ, ಎಲ್ಲರ ಮನಸ್ಸಿನಲ್ಲಿ ಈ ಕುಡಿಯುವ ನೀರಿನದು ಏನೋ ಒಂದು ಸಮಸ್ಯೆ

ಉದ್ಭವವಾಗುತ್ತದೆ. ಇನ್ನು ಮುಂದೆ 3–4 ತಿಂಗಳುಗಳಲ್ಲಿ ಇದು ಸಮಸ್ಯೆಯಾಗಿ ತಲೆದೋರುತ್ತದೆ. ಇದಕ್ಕೆ ಈಗಲಿಂದಲೇ ಪ್ರಯತ್ನ ಮಾಡಬೇಕೆಂಬ ಕಾಳಜಿಯನ್ನು ವಹಿಸಿ, ಇದನ್ನು ಯಾವ ರೀತಿಯಾಗಿ ಮಾಡಿದೆವೋ ಅದೇ ರೀತಿಯಾಗಿ ನೀರಾವರಿಗೆ ನಾವು ಮಾಡತಕ್ಕಂಥಾದ್ದು ಇದೆ. ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ, ಪದೇ ಪದೇ ಹೇಳಿದ್ದಾರೆ. ಯಾವ ರೀತಿಯಿಂದಲೂ ವಿಜಾಪುರದ ಮತ್ತು ಬಾಗಲಕೋಟೆಯ ಜನತೆಗೆ ಅನ್ಯಾಯ ಮಾಡುವುದಿಲ್ಲ. ಅವರ ಪಾಲಿನ ನೀರನ್ನು ಬಳಕೆ ಮಾಡತಕ್ಕಂಥಾದ್ದನ್ನು ನಾವು ಮಾಡುತ್ತೇವೆಂದು, ಸ್ಪಷ್ಟವಾಗಿ ಹೇಳಿದ್ದೇವೆ. ಮಾನ್ಯ ಹುನಗುಂದದ ಶಾಸಕರು ನಮ್ಮ ಬಳಿ ಬಂದಿದ್ದರು. ಅವರಿಗೆ ನಾನು ಇದು 'ಎ' ಸ್ಕೀಮ್‌ನಲ್ಲಿ ಇದೆ. ತಾವು ಏಕೆ ಕಾಳಜಿ ಮಾಡುತ್ತೀರಿ? ಇದನ್ನು ಖಂಡಿತವಾಗಿ ಅಧಿಕಾರಿಗಳನ್ನು ಕರೆಸಿ ಪ್ರಾರಂಭ ಮಾಡಿಸುತ್ತೇನೆಂದು ಹೇಳಿದ್ದೇನೆ. ನಾನು ಸನ್ಮಾನ್ಯ ವಿರೋಧಪಕ್ಷದ ನಾಯಕರನ್ನು ಹಾಗೂ ನಮ್ಮ ಎಲ್ಲಾ ಸದಸ್ಯರುಗಳಿಗೂ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ, ಮತ್ತು ಈ ಮನೆಯ ಮುಖಾಂತರ ನಾನು ಅಪೀಲು ಮಾಡುತ್ತೇನೆ. ಅಲ್ಲಿ ಶಾಂತಿಯನ್ನು ಕಾಪಾಡಬೇಕು, ಇಲ್ಲಿ ಈ ಹೇಳಿಕೆಯನ್ನು ಕೊಟ್ಟ ಮೇಲೆ, ಬಹುಶಃ ಅವರು ತಮ್ಮ ಉಪವಾಸ ಸತ್ಯಾಗ್ರಹವನ್ನು ವಾಪಸ್ಸು ತೆಗೆದುಕೊಂಡು, ಮಾನ್ಯ ಮುಖ್ಯಮಂತ್ರಿಯವರು ಏನು ಆಮಂತ್ರಣವನ್ನು ಕೊಟ್ಟಿದ್ದಾರೆ. ಅದಕ್ಕೆ ಓಗೊಟ್ಟು ಬರಬೇಕು. ಅದನ್ನು ಧಿಕ್ಕರಿಸಬಾರದು. ಆ ರೀತಿ ಧಿಕ್ಕರಿಸಿದರೆ, ಒಂದು ಅಥಾರಿಟಿಗೇ ಒಬ್ಬ ಮುಖ್ಯಮಂತ್ರಿಯವರು ನಿಮ್ಮನ್ನು ಬನ್ನಿ ನಾವು ಸಾಲ್ವ್ ಮಾಡುತ್ತೇವೆಂದು ಹೇಳಿದರೆ, ಸ್ಥಳದಲ್ಲೇ ಒಂದು ಸಾಲ್ವ್ ಮಾಡಬೇಕು. ನೀವೆಲ್ಲಾ ಬರಬೇಕು, ನಿಮ್ಮ ಮಂತ್ರಿಗಳು ಬರಬೇಕು. ಇಲ್ಲಿ ಉಸ್ತುವಾರಿ ಸಚಿವರು ಹೋದರೆ ಅವರು ಇಲ್ಲ ಎಂದು ಈ ರೀತಿಯಾಗಿ ಪ್ರತಿಯೊಬ್ಬರು ಪ್ರೆಸ್ಟೇಜ್ ಅನ್ನು ಇಷ್ಯೂ ಮಾಡಿಕೊಂಡು ಹೋದರೆ, ಇದು ಬಹಳ ಕಷ್ಟವಾಗುತ್ತದೆ. ಈಗಾಗಲೇ ಸಾರ್ವಜನಿಕ ವಲಯದಲ್ಲಿರುವಂತಹ ಐದು ಬಸ್ಸುಗಳು, ಇದು ಮಲ್ಲಿಕಾರ್ಜುನ ಖರ್ಗೆಯವರದ್ದು ಅಲ್ಲ, ಮಾನ್ಯ ಧರ್ಮಸಿಂಗ್‌ರವರದ್ದು ಅಲ್ಲ, ಮಾನ್ಯ ಬಿ.ಎಸ್. ಯಡಿಯೂರಪ್ಪನವರದ್ದು ಅಲ್ಲ, ಇನ್ನೊಬ್ಬರದ್ದು ಅಲ್ಲ. ಇದು ಸಾರ್ವಜನಿಕರ ಆಸ್ತಿ. ಇದು ನಷ್ಟದಲ್ಲಿ ಹೋದರೆ, ಕೊನೆಗೆ ಪಬ್ಲಿಕ್ ಅಂಡರ್ ಟೇಕಿಂಗ್ ನಷ್ಟದಲ್ಲಿರುತ್ತದೆ. ಈಗ ಏನು ಟ್ರೆಂಡ್ ಬೆಳೆಯುತ್ತಿದೆ, ಪಬ್ಲಿಕ್ ಅಂಡರ್ ಟೇಕಿಂಗ್ ಇರುವಂಥಾದ್ದನ್ನು, ಕ್ಲೋಸ್ ಮಾಡಿದೆಯೆಂದು, ಕೆಲವರು ಜನರು ಸ್ಲೋಗನ್ ಹಾಕಿಕೊಂಡು ಹೊರಟಿದ್ದಾರೆ, ಅದಕ್ಕೆ ನಾವು ಪ್ರೋತ್ಸಾಹ ಕೊಟ್ಟ ಹಾಗೆ ಆಗುತ್ತದೆ. ನಾನು ಮಾನ್ಯ ಮಾಧುಸ್ವಾಮಿಯವರು ಮಾತನಾಡಿದ್ದನ್ನು ಒಪ್ಪಿಕೊಳ್ಳುತ್ತೇನೆ. ಅವರು ಮಾತನಾಡುವಂತಹ ಸಂದರ್ಭದಲ್ಲಿ ಇಲ್ಲಿ ಟೆಂಪೂ, ಟ್ರಾಕ್ಸ್‌ಗಳು ಬಹಳ ಓಡಾಡುತ್ತಿವೆ. ನಿಮ್ಮ ಬಸ್ಸುಗಳೇ ಕಾಣುವುದಿಲ್ಲ. ಅದಕ್ಕಾಗಿ ಇದೆಲ್ಲಾ ಆಗುತ್ತಿದೆ ಎಂದು ಹೇಳಿದರೆ ಮೊನ್ನೆ ಕಿಬ್ಬನಹಳ್ಳಿ ಕ್ರಾಸ್‌ನಲ್ಲಿ ಅಪಘಾತವಾಗಿ ಇಷ್ಟು ಜನರು ಸತ್ತರು. ಅದಕ್ಕೆ ಕಾರಣವೇನೆಂದರೆ ನಿಮ್ಮ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ಹೆಚ್ಚಿನ ರೀತಿಯಲ್ಲಿ, ಹಳ್ಳಿಗಳ ಕಡೆಗಳಲ್ಲಿ ಓಡಾಡುವುದಿಲ್ಲ. ಹೆಚ್ಚು ಲಾಭದಾಯಕವಾದಂತಹ ರೂಟ್‌ನಲ್ಲಿ ಓಡಾಡುವುದರಿಂದ ಈ ಪರಿಸ್ಥಿತಿ ಬಂದಿದೆಯೆಂದು ಹೇಳಿದರು. ನಾನು ಅದರ ಅಂಕಿಸಂಖ್ಯೆಗಳು ಕೊಡುತ್ತೇನೆ. ನಾವು ಎಷ್ಟು ಹೆಚ್ಚಿಗೆ ಮಾಡಿದ್ದೇವೆ, ಎಷ್ಟು ರೂಟ್‌ಗಳು, ಎಷ್ಟು ಲಾಭ, ಲುಕ್ಸಾನ್ ಎಂಬುವ ಮಾತು ಬೇರೆ. ಆದರೂ ನಾವು ಸ್ವಲ್ಪ ಇಂಪ್ರೂವ್‌ಮೆಂಟ್ ಮಾಡಿದ್ದೇವೆ. ಇನ್ನೂ ಆಗಬೇಕು. ಇನ್ನೂ ಅನಧಿಕೃತವಾಗಿ ಹೋಗುವಂತಹ

ವಾಹನಗಳಿಗೂ ಕಡಿವಾಣವನ್ನು ಹಾಕುತ್ತೇವೆ. ಅದನ್ನು ಒಪ್ಪೋಣ. ನಾನು ಈ ಸಂದರ್ಭದಲ್ಲಿ ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಪಬ್ಲಿಕ್ ಪ್ರಾಪರ್ಟಿ, ಅದು ಆಫೀಸ್‌ಗಳು ಇರಬಹುದು, ಬಸ್ಸುಗಳು ಇರಬಹುದು, ಅದು ಯಾವುದೇ ಇರಬಹುದು. ಅದನ್ನು ನಮ್ಮ ಆಸ್ತಿಯೆಂದು ತಿಳಿದುಕೊಳ್ಳುವಂತಹ ಪ್ರಯತ್ನವನ್ನು ನಾವೆಲ್ಲರೂ ಮಾಡಿದ್ದರೆ, ಈ ರಾಜ್ಯದ ಆಸ್ತಿಯನ್ನು ಉಳಿಸಿಕೊಂಡು, ಈ ಸಂಪತ್ತು ಆದ ನೀರನ್ನು ಏನು ಹರಿಸಬೇಕೆಂಬ ಎಲ್ಲರ ಇಚ್ಛೆ ಏನು ಇದೆ, ಅದನ್ನು ನಾವು ಮಾಡುತ್ತೇವೆ. ಇನ್ನು ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಹೇಳಿದ ಹಾಗೆ ಯಾವ್ಯಾವ ಕೆರೆಗಳಿಗೆ ನೀರನ್ನು ಹರಿಸಬಹುದು, ಅದರ ಬಗ್ಗೆಯೂ ಕೂಡ ತಕ್ಷಣ ನಾನು ತಮ್ಮ ಕೃಷ್ಣಾ ಜಲ ಭಾಗ್ಯ ನಿಗಮದ ಎಂ.ಡಿ.ಗಳು ಇದ್ದಾರೆ, ಅವರಿಗೆ ನಾನು ಆದೇಶವನ್ನು ಕೊಡುತ್ತೇನೆ. ಅಲ್ಲಿ ಸರ್ವೆ ಮಾಡಿ, ಯಾವ್ಯಾವುದು ಆರ್ಥಿಕವಾಗಿ ಫೀಜಿಬಲ್ ಇದೆ, ಅಂಥದ್ದಕ್ಕೆ ಆಥವಾ ಫಿಜೀಬಲ್ ಇಲ್ಲದಿದ್ದರೂ ಕೂಡ, ಟೆಕ್ನಿಕಲ್ ಫೀಜಿಬಲ್ ಇದ್ದರೂ ಕೂಡ, ಪ್ರಯತ್ನ ಮಾಡುತ್ತೇವೆಂಬ ಮಾತನ್ನು ಹೇಳಿ, ಮನಃ ಒಮ್ಮೆ ನಾನು ಕೇಳಿಕೊಳ್ಳುತ್ತೇನೆ. ಅವರು ವಿತ್‌ಡ್ರಾ ಮಾಡಿಕೊಂಡು, ಮಾನ್ಯ ಮುಖ್ಯಮಂತ್ರಿಯವರು ಸಭೆಯನ್ನು ಕರೆದಿದ್ದಾರೆ. ಆ ಸಭೆಗೆ ಹಾಜರಾಗಿ, ಸವಿಸ್ತಾರವಾಗಿ ಚರ್ಚೆಯನ್ನು ಮಾಡಿ ತಮ್ಮ ತಪ್ಪು ತಿಳುವಳಿಕೆಗಳನ್ನು ಅವರು ಬಗೆಹರಿಸಿಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ವಿಜಾಪುರದ ಜನತೆಗೆ ಮತ್ತು ಬಾಗಲಕೋಟೆಯ ಜನತೆಗೆ, ಕೂಡ ಈ ಸದನದ ಮುಖಾಂತರ ಪ್ರಾರ್ಥಿಸಿಕೊಳ್ಳುತ್ತೇನೆ. ಅಲ್ಲಿ ಶಾಂತಿಯನ್ನು ಕಾಪಾಡಿಕೊಂಡು ಹೋಗಿ, ಸಿಟ್ಟಿನ ಕೈಯಲ್ಲಿ ನಾವು ವಾತಾವರಣವನ್ನು ಕೊಟ್ಟರೆ, ಸಮಸ್ಯೆಗಳು ಬಗೆಹರಿಯುವುದಿಲ್ಲ. ಕೊನೆಗೆ ನಾವೆಲ್ಲರೂ ತೊಂದರೆಗೆ ಬೀಳುತ್ತೇವೆಯೇ ಹೊರತು, ಸಮಸ್ಯೆ ಬಗೆಹರಿಯುವುದಿಲ್ಲ. ಅದಕ್ಕೆ ನಾವೆಲ್ಲರೂ ಇದನ್ನು ಬಗೆಹರಿಸುವಂತಹ ದಿಕ್ಕಿನಲ್ಲಿ ಪ್ರಯತ್ನವನ್ನು ಮಾಡೋಣವೆಂಬ ಮಾತನ್ನು, ತಮ್ಮ ಮುಖಾಂತರ ಹೇಳಲಿಚ್ಚಿಸುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ): ಮಾನ್ಯ ಅಧ್ಯಕ್ಷರೇ, ಒಂದು ಕ್ಲಾರಿಫಿಕೇಶನ್, ರೆಕಾರ್ಡ್‌ಗೆ ತಪ್ಪು ಮಾಹಿತಿ ಹೋಗಬಾರದು ಬೇಡ. ನಾನು ಭಾಷಣವನ್ನು ಮಾಡುವುದಕ್ಕೆ ಹೊರಟಿಲ್ಲ. ಒಂದೆರಡು ನಿಮಿಷ ಹೇಳುತ್ತೇನೆ. ನಾನು ಮೊನ್ನೆ ದಿವಸ ಈ ಸದನದಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದೆ. ನಾನು ನಿಯಮ 69ಅಡಿಯಲ್ಲಿ ಏನು ಹೇಳಿದೆಯೆಂದರೆ, ಈಗಾಗಲೇ ನೀರಿನ ಹಂಚಿಕೆಯ 'ಎ' ಸ್ಕೀಮ್‌ನದ್ದು ಮುಗಿದುಹೋಗಿದೆ. 'ಬಿ' ಸ್ಕೀಮ್‌ಗೂ ಕೂಡ ದಿವಂಗತ ಬಾಳಕುಂದ್ರಿಯವರು, ನೀರಾವರಿ ಕಾರ್ಯದರ್ಶಿಗಳಾಗಿದ್ದಂತಹ ಸಂದರ್ಭದಲ್ಲಿ ವಿಜಾಪುರಕ್ಕೆ ಎಷ್ಟು ನೀರು ಬರಬೇಕು, ಬೇರೆ ಯೋಜನೆಗಳಿಗೆ ಎಷ್ಟು ಬರಬೇಕೆಂಬ ಮಾಸ್ಟರ್ ಪ್ಲಾನ್ ರೆಡಿ ಮಾಡಿದ್ದರು. ಆ ಯೋಜನೆಯ ಪ್ರಕಾರ, 'ಬಿ' ಸ್ಕೀಂನಲ್ಲಿ ಬರತಕ್ಕಂಥ 129 ಟಿ.ಎಂ.ಸಿ. ನೀರು ವಿಜಾಪುರದ ಸ್ವಲ್ಪ ಭಾಗ ಗುಲ್ಬರ್ಗಾ ಜಿಲ್ಲೆಗೂ ಬರತಕ್ಕಂಥಾದ್ದು. ಇದರಲ್ಲಿ ಕಡಿತಗೊಳಿಸುವ ಸರ್ಕಾರದ್ದೇ ಪತ್ರ ಇದು. ಇದನ್ನು ಕೃಷ್ಣಾ ಭಾಗ್ಯ ಜಲನಿಗಮದ ಎಂ.ಡಿ.ಯವರು, ದಿನಾಂಕ: 4.1.2002ರಲ್ಲಿ ಒಂದು ಪತ್ರವನ್ನು ಕಡಿತಗೊಳಿಸುವುದರ ಬಗ್ಗೆ ಬರೆದಿದ್ದಾರೆ. ಇದು ಸರ್ಕಾರದ ಮಟ್ಟದಲ್ಲಿ ಸಭೆ ಆದಂಥಾದ್ದರ ಬಗ್ಗೆ ದಾಖಲೆ ಇದೆ. ಆ ದಾಖಲೆಯ ಪ್ರಕಾರ extension of NRBC 22.50 TMC. ಇತ್ತು, ಅದನ್ನು 18.9 ಟಿ.ಎಂ.ಸಿ.ಗೆ ಇಳಿಸಿದ್ದಾರೆ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಮಾನ್ಯ ಅಧ್ಯಕ್ಷರೇ, ಮಾನ್ಯ ಗೋವಿಂದ ಕಾರಜೋಳರವರು ಒಪ್ಪುವುದಾದರೆ, ನೀವು ಇಲ್ಲಿ ಯಾವ ಪತ್ರವನ್ನು ಇಟ್ಟುಕೊಂಡಿದ್ದಿರೆಂದರೆ ಶ್ರೀ ಪಾರ್ಥಸಾರಥಿಯವರು, ಸರ್ಕಾರದ ಕಾರ್ಯದರ್ಶಿಯವರಿಗೆ ಬರೆದಿದ್ದಂತಹ ಪತ್ರ ಅದು. 'ಬಿ' ಸ್ಕೀಮ್‌ನಲ್ಲಿ ಏನೇನು ನೀರಿನ ಉಪಯೋಗ ಮಾಡಬಹುದೆಂಬುದರ ಬಗ್ಗೆ, ಒಂದು ಮಾಸ್ಟರ್ ಕಮಿಟಿಯನ್ನು ಶ್ರೀ ಬಿ.ಸಿ. ಅಂಗಡಿ ಎನ್ನುವ ಒಬ್ಬ ಮೇಧಾವಿ, ಮತ್ತು ಕರ್ನಾಟಕ ರಾಜ್ಯದ ಬಗ್ಗೆ ಅತ್ಯಂತ ಕಳಕಳಿಯಿಂದ ಕೆಲಸ ಮಾಡುವಂತಹ ಒಬ್ಬ ಅಧಿಕಾರಿಯನ್ನು ಈ 'ಬಿ' ಸ್ಕೀಂ ಮಾಸ್ಟರ್ ಕಮಿಟಿಯ ಚೇರ್‌ಮನ್ ಆಗಿ ಮಾಡಿದ್ದೆವು. ಅವರು ಎಕ್ಸೆಸ್ಸೈಸ್ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಇವರು ಬರೆದಿರುವಂತಹ ಪತ್ರ ಇದು. ಇದು ಆದ ಮೇಲೆ ಮೀಟಿಂಗ್‌ಗಳು ಆಗಿದೆ, ಶ್ರೀ ರಾಮಪ್ರಸಾದ್‌ರವರು ಸ್ಟಡಿ ಮಾಡಿದ್ದಾರೆ. ಈ ವಿಷಯಕ್ಕೆ ನಾನು ಆಮೇಲೆ ಬರುತ್ತೇನೆ. ಆದರೆ ತಮ್ಮ ಗಮನಕ್ಕೆ ತರುತ್ತೇನೆ. ತಾವು ಒಂದು ರಾಷ್ಟ್ರೀಯ ಪಕ್ಷವನ್ನು ಪ್ರತಿನಿಧಿಸಿ ಈ ಮಾತನ್ನು ಹೇಳುತ್ತಿದ್ದೀರಿ. ನಮಗೆ 'ಬಿ' ಸ್ಕೀಮ್‌ನಲ್ಲಿ ಎಷ್ಟು ನೀರು ಬರಬೇಕು. ನಮಗೆ 285 ಟಿ.ಎಂ.ಸಿ., ನೀರು ಬರಬೇಕು, 290 ಟಿ.ಎಂ.ಸಿ. ಬರಬೇಕು, 300 ಟಿ.ಎಂ.ಸಿ. ನೀರು ಬರಬೇಕೆಂದು ಹೇಳಿ, ನಾವು ಒತ್ತಾಯವನ್ನು ಮಾಡುವಂತಹ ಹಂತದಲ್ಲಿ ಇದ್ದೇವೆ. ನಮಗೆ ಎಷ್ಟು ನೀರು ಬರುತ್ತದೆಂಬ ಬಗ್ಗೆ ಇನ್ನೂ ಸ್ಪಷ್ಟತೆ ಇಲ್ಲ. ನಾವು ಕರ್ನಾಟಕದವರು 'ಎ' ಸ್ಕೀಮ್ ಆಗಲಿ, 'ಬಿ' ಸ್ಕೀಮ್ ಆಗಲಿ, ಒಂದು ನಿಲುವನ್ನು ತೆಗೆದುಕೊಂಡಿದ್ದೇವೆ. ಈ ಯಾವುದೇ ಸ್ಕೀಮ್‌ನಲ್ಲಿ ಬರುವಂತಹ ನೀರು "ಎನ್ ಬ್ಲಾಕ್ ವಾಟರ್ ಅಲಾಟ್‌ಮೆಂಟ್" ನಮಗೆ ಬರುತ್ತದೆ. ನಮಗೆ 290 ಟಿ.ಎಂ.ಸಿ., 300 ಟಿ.ಎಂ.ಸಿ. ನೀರು ಬಂತೆಂದರೆ, ಆ 300 ಟಿ.ಎಂ.ಸಿ. ನೀರನ್ನು ಯಾವುದಕ್ಕೆ ಬಳಕೆ ಮಾಡಿಕೊಳ್ಳಬೇಕೆಂಬ ಬಗ್ಗೆ, ನಮ್ಮ ರಾಜ್ಯದ ಹಕ್ಕು. ಇವತ್ತು 'ಬಿ' ಸ್ಕೀಮ್ ಮಾಸ್ಟರ್ ಪ್ಲಾನ್ ಮಾಡಿರುವಂಥಾದ್ದರಲ್ಲಿ, ಯಾವುದೇ sacrosanct ಅಲ್ಲ ಈಗ 'ಎ' ಸ್ಕೀಮ್ ಅನ್ನು ಕೊನೆಯವರೆಗೂ ಅಲ್ಪಸ್ವಲ್ಪ, ಕೊನೆಗೆ ಅಂತಿಮವಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರುವಂತಹ ವರದಿಗಳು ಏನು ಇವೆ, ಅಲ್ಲಿಯವರೆಗೂ ಬದಲಾವಣೆಗಳನ್ನು ಮಾಡಿಕೊಂಡಿದ್ದೇವೆ. ತಮಗೂ ಗೊತ್ತಿರುವ ಹಾಗೆ ಸವದತ್ತಿಯಲ್ಲಿ ಕಟ್ಟಿರುವಂತಹ "ರೇಣುಕಾ ಸಾಗರ" ಏನು ಇದೆ, ಆ ಮಲಪ್ರಭಾ ಯೋಜನೆಗೆ 47 ಟಿ.ಎಂ.ಸಿ. ಎಂದು ಕರ್ನಾಟಕದಲ್ಲಿ ನಿರ್ಣಯಿಸಿದ್ದೆವು. ಆದರೆ ಕಳೆದ 30 ವರ್ಷಗಳಲ್ಲಿ ಒಂದು ಸಲ 27 ಟಿ.ಎಂ.ಸಿ.ಗಿಂತ ಹೆಚ್ಚಿಗೆ ನೀರು ಬರಲಿಲ್ಲ.

ನಾವು 'ಎ' ಸ್ಕೀಮಿನಲ್ಲಿ ಮಾರ್ಪಾಡು ಮಾಡತಕ್ಕಂಥ ಪ್ರಸಂಗ ಉದ್ಭವವಾಯಿತು. ಆದ್ದರಿಂದ ಹೇಳುತ್ತೇನೆ, 'ಬಿ' ಸ್ಕೀಂನಲ್ಲಿ ನಮಗೆ ಎಷ್ಟು ನೀರು ಬರುತ್ತದೆ, ಏನು ಎನ್ನುವುದು ಇನ್ನೂ ಸ್ಪಷ್ಟತೆ ಇಲ್ಲ. ನೀರು ಇನ್ನೂ ಹಂಚಿಕೆಯಾಗಿಲ್ಲ. ಆದ್ದರಿಂದ, ಈ ಹಂತದಲ್ಲಿ ನಾವು ಮಹಾರಾಷ್ಟ್ರ, ಆಂಧ್ರದವರ ಜೊತೆಗೆ ಹೋರಾಟ ಮಾಡುವುದನ್ನು ಬಿಟ್ಟು, ನ್ಯಾಯ ಸಮರ ಮಾಡುವುದನ್ನು ಬಿಟ್ಟು, ನಮಗೆ ನೀರು ಹೆಚ್ಚಿಗೆ ಆಯಿತು, ಗುಲ್ಬರ್ಗಾಕ್ಕೆ ನೀರು ಹೆಚ್ಚಿಗೆ ಕೊಟ್ಟಿರಿ, ಕುಷ್ಟಗಿಗೆ ನೀರು ಕೊಟ್ಟಿರಿ, ಮುಧೋಳಕ್ಕೆ ನೀರು ಕೊಟ್ಟಿರಿ ಬಾಗಲಕೋಟೆಗೆ ನೀರು ಕೊಟ್ಟಿರಿ ಎಂದು ನಾವು ನಾವೇ ಬಡಿದಾಡಿದರೆ ಹೇಗೆ? ನಮಗೆ ಇನ್ನೂ ಎಷ್ಟು ನೀರು ಬರುತ್ತದೆ ಎನ್ನುವ ಬಗ್ಗೆ ಸ್ಪಷ್ಟತೆ ಇಲ್ಲ. ಆದ್ದರಿಂದ ಜನರಲ್ಲಿ ತಪ್ಪು ಕಲ್ಪನೆ ಹೋಗಿ, ಅವರಲ್ಲಿ ಗೊಂದಲ ಹುಟ್ಟತಕ್ಕಂಥಾದ್ದು ಏನು ಆಗುತ್ತಿದೆ, ಅದು ಸರ್ವಥಾ ಆಗಬಾರದು. ಪಾರ್ಥಸಾರಥಿಯವರು ಬರೆದಿರತಕ್ಕಂಥ ಪತ್ರದ ಮೇಲೆ ಸಾಕಷ್ಟು

ಚರ್ಚೆಯಾಗಿದೆ. ನಿಮಗೆ ಬೇಕಾದರೆ, ಜಲ ಸಂಪನ್ಮೂಲ ಸಚಿವರ ಹತ್ತಿರ ಹೋಗಿ, ಈ ಕಡತವನ್ನೇ ನೋಡಿ. ಪಾರ್ಥಸಾರಥಿಯವರ ಲೆಟರ್‌ಗೆ ಅಂಗಡಿಯವರು ಏನು ಉತ್ತರ ಹೇಳಿದರು, ಅಂಗಡಿಯವರು ಏನು ಉತ್ತರ ಹೇಳಿದರು, ಅಂಗಡಿ ಕಮಿಟಿಯವರು ಏನು ಹೇಳಿದರು, ಪ್ರೊಫೆಸರ್ ರಾಮಪ್ರಸಾದ್‌ರವರು ಏನು ಅಧ್ಯಯನ ಮಾಡಿದ್ದಾರೆ ಎನ್ನುವುದೆಲ್ಲವನ್ನೂ ನೋಡಿ. ಎಲ್ಲಿ ನೀರು ಇಲ್ಲ, ಅಲ್ಲಿ ನೀರು ಕೇಳಿದರೆ, ನೀರು ಸಿಗುವುದಿಲ್ಲ. ಅದಕ್ಕೆ ಆಲ್ಟರ್‌ನೇಟಿವ್ ಏನು ಎನ್ನುವುದನ್ನು ಸಹ ಇವತ್ತು ನಾವು ವಿಚಾರ ಮಾಡಬೇಕಾಗಿದೆ. ಈಗಾಗಲೇ ಜಲ ಸಂಪನ್ಮೂಲ ಸಚಿವರು ಸ್ಪಷ್ಟವಾಗಿ ಹೇಳಿದ್ದಾರೆ, ನಾವು ಯಾವುದೇ ಹಣಕಾಸಿನ ಕಾರಣಕ್ಕಾಗಿಯಾಗಲೀ ಅಥವಾ ಯಾವುದೇ ಇನ್ನಿತರ ಕಾರಣಕ್ಕಾಗಿಯಾಗಲೀ 'ಎ' ಸ್ಕೀಮಿನ ಯೋಜನೆಗಳನ್ನು ನಿಲ್ಲಿಸತಕ್ಕಂಥಾದ್ದು ಇಲ್ಲ. ಈ ಎಲ್ಲಾ ಸೂಕ್ಷ್ಮತೆಯ ಹಿನ್ನಲೆಯಲ್ಲಿ ನಾವು 'ಬಿ' ಸ್ಕೀಮಿನ ಯೋಜನೆಯ ಬಗ್ಗೆ ಚರ್ಚೆ ಮಾಡುವುದೂ ಸಹ ಸರಿಯಾದುದಲ್ಲ. ಇಂಥ ವಿಚಾರಗಳನ್ನು ತಾವು ಅಧ್ಯಕ್ಷರ ಕೊಠಡಿಯಲ್ಲಾಗಲೀ ಅಥವಾ ಜಲ ಸಂಪನ್ಮೂಲ ಸಚಿವರ ಕೊಠಡಿಯಲ್ಲಾಗಲೀ ಹೋಗಿ, ವಿವರ ಕೇಳಿ ಚರ್ಚೆ ಮಾಡುವುದು ಸೂಕ್ತ ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ: ನೀರನ್ನು ಕಡಿತಗೊಳಿಸುವುದಿಲ್ಲ ಎಂದರೆ ನಾನು ಸರ್ಕಾರಕ್ಕೆ ಜನರ ಪರವಾಗಿ ಥ್ಯಾಂಕ್ಸ್ ಹೇಳುತ್ತೇನೆ. ಇವತ್ತು ಜನರಲ್ಲಿ ಗೊಂದಲ ಸೃಷ್ಟಿಯಾಗಲು ಕಾರಣೀಭೂತರ್ಯಾರು? ಈ ಸರ್ಕಾರಿ ಅಧಿಕಾರಿಗಳ ಪತ್ರ, ಇವರ ಸಭೆಗಳು ಜನರಲ್ಲಿ ಗೊಂದಲವನ್ನು ಸೃಷ್ಟಿ ಮಾಡಿರತಕ್ಕಂಥಾವಾಗಿವೆ. ಜನರಿಗೆ ತಪ್ಪು ಮೆಸೇಜ್ ಹೋಗಿದೆ. 32 ಟಿ.ಎಂ.ಸಿ.ಯಷ್ಟು ನೀರನ್ನು ಕಡಿತ ಮಾಡುವುದಿಲ್ಲ ಎಂದು ಇವತ್ತು ಸರ್ಕಾರ ಹೇಳಿದರೆ, ಅಲ್ಲಿನ ರೈತರ ಪರವಾಗಿ ಮತ್ತು ಜಿಲ್ಲೆಯ ಜನರ ಪರವಾಗಿ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುವಲ್ಲಿ ನಾನೇ ಮೊದಲನೆಯವನಾಗುತ್ತೇನೆ. 2000ದ ಮೇ ತಿಂಗಳಲ್ಲಿ 'ಎ' ಸ್ಕೀಮಿನಲ್ಲಿ ನಮ್ಮ ಜಿಲ್ಲೆಗೆ ಏನು ನೀರಾವರಿಯಾಗಬೇಕಾಗಿತ್ತೋ ಅದು ಇವತ್ತಿನವರೆಗೂ ಆಗಿಲ್ಲ. ಭೂಮಿ, ಮನೆ, ಮಠಗಳನ್ನು ಕಳೆದುಕೊಂಡು ಯಾರು ನಿರ್ಗತಿಕರಾಗಿದ್ದಾರೆ, ನಿರಾಶ್ರಿತರಾಗಿದ್ದಾರೆ, ಅಂಥವರಿಗೆ ಇವತ್ತಿನವರೆಗೂ ಒಂದು ಹನಿ ಕೂಡ ನೀರಾವರಿಯಾಗಲಿ. ಮಾನ್ಯ ಸಚಿವರು ಅಂಕಿಅಂಶಗಳನ್ನು ಕೊಟ್ಟರು, ಅದನ್ನು ನಾನು ಒಪ್ಪುತ್ತೇನೆ. ಈಗಾಗಲೇ ನಾವು ಬಿಜಾಪುರ ಜಿಲ್ಲೆಯ ಯೋಜನೆಗಳಿಗೆ 1600 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಎಂದು ಹೇಳಿದಿರಿ. ಆದರೆ ಹೆಚ್ಚು ಹಣ ಖರ್ಚಾದದ್ದು ರೀಹ್ಯಾಬಿಲಿಟೇಷನ್ ಸಲುವಾಗಿ, ಕಾಂಪನ್‌ಸೇಷನ್ ಸಲುವಾಗಿ ಮತ್ತು ಅಣೆಕಟ್ಟನ್ನು ಕಟ್ಟುವ ಸಲುವಾಗಿ ಖರ್ಚಾಗಿದೆ. ಆದರೆ ನಾನು ಕೇಳುವುದೇನೆಂದರೆ, ಬಿಜಾಪುರ ಜಿಲ್ಲೆ ಮತ್ತು ಬಾಗಲಕೋಟೆ ಜಿಲ್ಲೆಗಳ ರೈತರ ಭೂಮಿಗೆ ನೀರು ಕೊಡತಕ್ಕಂಥ ಕೆಲಸ ಆಗಲಿಲ್ಲ. 'ಎ' ಸ್ಕೀಮಿನಲ್ಲಿ ಬರತಕ್ಕಂಥ ಎಲ್ಲಾ ಯೋಜನೆಗಳ ಬಗ್ಗೆ ಮೊನ್ನೆ ನಾನು ವಿವರಣೆಯನ್ನು ಕೊಟ್ಟಿದ್ದೇನೆ. ಇವತ್ತು ನಾನು ತಮಗೆ ಉದಾಹರಣೆಗಾಗಿ 2–3 ವಿಚಾರಗಳನ್ನು ಹೇಳುತ್ತೇನೆ. ಮುಳವಾಡ ಏತ ನೀರಾವರಿ ಯೋಜನೆಯಲ್ಲಿ 30,850 ಹೆಕ್ಟೇರ್ ಭೂಮಿ ನೀರಾವರಿಯಾಗಬೇಕಾಗಿತ್ತು. ಆದರೆ ಅದು ಇವತ್ತಿನವರೆಗೆ ಆಗಿಲ್ಲ. ನಾವು ಡ್ಯಾಂಗಳಲ್ಲಿ ನೀರನ್ನು ಹಿಡಿದಿಟ್ಟುಕೊಂಡಿದ್ದೇವೆ ಎಂದರೆ ಅದು ಸಂತೋಷ ಪಡುವ ವಿಷಯವಲ್ಲ. ಅದೊಂದು ದುಃಖದ ಸಂಗತಿ. ನಾನು ಏಕೆ ಈ ಮಾತನ್ನು ಹೇಳುತ್ತೇನೆ ಎಂದರೆ

ಯಾರು ಅಲ್ಲಿ ಸಾವಿರಾರು ವರ್ಷಗಳಿಂದ ಊರುಗಳನ್ನು ಕಟ್ಟಿಕೊಂಡು ನೆಲೆಸಿದ್ದರು,, ಪಿತ್ರಾರ್ಜಿತ ಆಸ್ತಿ ಇತ್ತು, ಅದೆಲ್ಲವನ್ನೂ ಕಳೆದುಕೊಂಡು ಇವತ್ತು ಅವರು ನಿರ್ಗತಿಕರಾಗಿದ್ದಾರೆ ಎಂದರೆ ಅದು ಸಂಕಟ ಪಡುವ ವಿಚಾರ. ಆ ಜನರ ಸಹಾಯಕ್ಕೆ ಸರ್ಕಾರ ಬರಬೇಕೆಲ್ಲವೇ? ಅದು ಇವತ್ತಿನವರೆಗೂ ಆಗಲಿಲ್ಲ. ಇವತ್ತಿಗೂ ಸಹ, ಹಣದ ತೊಂದರೆಯಿಂದ ಆ ಯೋಜನೆ ಕುಂಟಿತವಾಗಿವೆ. ಇದಕ್ಕೆ ಪ್ರತಿವರ್ಷ ತಾವು ಎಷ್ಟು ಹಣ ಇಟ್ಟಿದ್ದೀರಿ ಎನ್ನುವುದನ್ನು ದಯಮಾಡಿ ತೆಗೆದು ನೋಡಿ. ಬೇಕಾದರೆ ನನ್ನ ಹತ್ತಿರ ವಿವರವಿದೆ, ಎಲ್ಲವನ್ನೂ ತಂದಿದ್ದೇನೆ. ಪ್ರತಿವರ್ಷ ಎಷ್ಟು ಹಣ ಇಟ್ಟಿದ್ದಿರಿ, ಎಷ್ಟು ಖರ್ಚು ಮಾಡಿದಿರಿ ಎನ್ನುವ ಎಲ್ಲಾ ವಿವರವಿದೆ. 40 ವರ್ಷವಾಯಿತು. ಇವತ್ತಿನವರೆಗೆ ಆ ಯೋಜನೆಯನ್ನು ಸರ್ಕಾರ ಕಂಪ್ಲೀಟ್ ಮಾಡಲು ಆಗಲಿಲ್ಲ. ಅದಕ್ಕಾಗಿ, ನಾನು ತಮ್ಮಲ್ಲಿ ಏನು ವಿನಂತಿ ಮಾಡುತ್ತೇನೆಂದರೆ, ಅಲ್ಲಿಯ ಜನ ಯಾವ ಡಿಮ್ಯಾಂಡನ್ನು ಇಟ್ಟುಕೊಂಡು ಸತ್ಯಾಗ್ರಹವನ್ನು ಪ್ರಾರಂಭ ಮಾಡಿದ್ದಾರೆ, ಅವರ ಆ ಡಿಮ್ಯಾಂಡನ್ನು ಫುಲ್‌ಫಿಲ್ ಮಾಡಲು ಒಂದು ನಿಶ್ಚಿತವಾದಂಥ ಭರವಸೆಯನ್ನು ತಾವು ಕೊಡಬೇಕಾಗುತ್ತದೆ. ಆಲಮಟ್ಟಿ ಯೋಜನೆಯಲ್ಲಿ ಬರತಕ್ಕಂಥ ಬಿಜಾಪುರ ಮತ್ತು ಬಾಲಕೋಟೆ ಯೋಜನೆಗಳಿಗೆ 2005–06ನೇ ಸಾಲಿನ ಬಜೆಟ್ಟಿನಲ್ಲಿ ಎರಡೂವರೆ ಸಾವಿರ ಕೋಟಿ ರೂಪಾಯಿಗಳನ್ನಿಟ್ಟು, ಕೂಡಲೇ ಆ ಯೋಜನೆಗಳನ್ನು ಪೂರ್ತಿಗೊಳಿಸಿ ಎಂದು ಅವರು ಕೇಳುತ್ತಿದ್ದಾರೆ. ಇನ್ನೊಂದು ಏನು ಕೇಳುತ್ತಾರೆ ಎಂದರೆ, ಈಗಾಗಲೇ, 'ಬಿ' ಸ್ಕೀಮಿಗೆ ಏನು ಮಾಸ್ಟರ್ ಪ್ಲಾನ್ ಮಾಡಲಾಗಿದೆ, ಆ ನೀರನ್ನು ಕಡಿತಗೊಳಿಸಬಾರದು. ಬಿಜಾಪುರ ಜಿಲ್ಲೆಯಲ್ಲಿ ಸುಮಾರು 160 ಕೆರೆಗಳಿವೆ. ಆ ಕೆರೆಗಳಿಗೆ ನೀರು ತುಂಬಿಸುವಂಥ ಕೆಲಸ ಮಾಡಬೇಕಾಗಿದೆ. ಕೆರೆಗಳಿಗೆ ನೀರು ತುಂಬಿಸುವ ಕೆಲಸವನ್ನು ಮಾಡುವುದರಿಂದ ಅಂತರ್ಜಲ ಹೆಚ್ಚಾಗುತ್ತದೆ, ಕುಡಿಯುವ ನೀರಿನ ಸಮಸ್ಯೆ ಬಗೆಹರಿಯುತ್ತದೆ. ಕಳೆದ ಮೂರು ವರ್ಷಗಳಲ್ಲಿ ಬಿಜಾಪುರ ಮತ್ತು ಬಾಗಲಕೋಟೆಗಳಲ್ಲಿ 40 ಕೋಟಿ ರೂಪಾಯಿಗಳನ್ನು ಕೇವಲ ವಾಟರ್ ಟ್ರಾನ್ಸ್‌ಪೋರ್ಟೇಷನ್ನಿಗೆ ಖರ್ಚು ಮಾಡಿದ್ದಾರೆ. ಅದಕ್ಕಾಗಿ, ನಾನೇನು ವಿನಂತಿ ಮಾಡುತ್ತೇನೆಂದರೆ, ಕೆರೆಗಳನ್ನು ತುಂಬಿಸತಕ್ಕಂಥ ಯೋಜನೆಗೆ ಈಗಾಗಲೇ ಸಣ್ಣ ನೀರಾವರಿ ಇಲಾಖೆಯವರು ಒಂದು ಯೋಜನೆಯಲ್ಲಿ ರೆಡಿ ಮಾಡಿದ್ದಾರೆ. ಅದಕ್ಕೆ ಸುಮಾರು 200 ಕೋಟಿ ರೂಪಾಯಿಗಳಾಗುತ್ತದೆ. ಆ ಯೋಜನೆಯನ್ನು ಸಹ ಆಲಮಟ್ಟಿ ಯೋಜನೆಯಲ್ಲಿ ಸೇರಿಸಿ, ಆ ಕೆರೆಗಳನ್ನೂ ತುಂಬಿಸುವಂಥ ಕೆಲಸ ಮಾಡಬೇಕು. ಅದಕ್ಕೆ ಪ್ರತ್ಯೇಕ ವಾಟರ್ ಅಲೋಕೇಷನ್ ಬೇಕಾಗಿಲ್ಲ. ಏಕೆಂದರೆ 'ಎ' ಸ್ಕೀಮಿನಲ್ಲಿ ಬರತಕ್ಕಂಥ ಎಲ್ಲಾ ಯೋಜನೆಗಳಲ್ಲೇ ಇದೂ ಸೇರಿದೆ. ಅದಕ್ಕೆ 1.2 ಟಿ.ಎಂ.ಸಿ.ಯಷ್ಟು ನೀರು ಬೇಕಾಗುತ್ತದೆ. ಇದಕ್ಕೆ ತಾವು ಸ್ಪಷ್ಟವಾದಂಥ ಉತ್ತರವನ್ನು ಹೇಳಬೇಕೆಂದು ನಾನು ವಿನಂತಿ ಮಾಡುತ್ತೇನೆ. ಇದರ ಜೊತೆಯಲ್ಲಿ, ನಾನು ಮಾನ್ಯ ನೀರಾವರಿ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಇದರಲ್ಲಿ ಯಾರ ಪ್ರೆಸ್ಟೀಜ್ ಪ್ರಶ್ನೆ ಇಲ್ಲ, ಬಸವನಗೌಡರದ್ದೂ ಪ್ರೆಸ್ಟೀಜ್ ಪ್ರಶ್ನೆಯಲ್ಲ, ಮತ್ತೊಬ್ಬರದೂ ಪ್ರೆಸ್ಟೀಜ್ ಪ್ರಶ್ನೆಯಿಲ್ಲ, ಅಲ್ಲಿ ಸತ್ಯಾಗ್ರಹ ಮಾಡುತ್ತಿರುವ ರೈತರ ಸಲುವಾಗಿ ತಾವು ಕಳಕಳಿಯಿಂದ ಆಲಮಟ್ಟಿ ಡ್ಯಾಂ ಸೈಟಿಗೆ ಹೋಗಿ, ಉಪವಾಸ ಸತ್ಯಾಗ್ರಹ ಮಾಡುತ್ತಿರುವವರನ್ನು ಎಬ್ಬಿಸಬೇಕು. ಈ ಬಗ್ಗೆ ಸರ್ಕಾರ ಒಂದು ಸ್ಪಷ್ಟವಾದಂಥ ಭರವಸೆಯನ್ನು ಕೊಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಪದೇ ಪದೇ ತಪ್ಪು ತಿಳುವಳಿಕೆ ಆಗಬಾರದೆಂದು ಮತ್ತು

ಪತ್ರಿಕೆಗಳಲ್ಲೂ ಕೂಡ ಬರಬಾರದೆಂದು ನಾನು ಅವರಿಗೆ ಕ್ಲಾರಿಫೈ ಮಾಡುತ್ತೇನೆ. ನಾನು ಈಗಾಗಲೇ ಸ್ಪಷ್ಟಪಡಿಸಿದ್ದೇನೆ, 'ಎ' ಸ್ಕೀಮಿನಲ್ಲಿ ಬರತಕ್ಕಂಥ ಎಲ್ಲಾ ಯೋಜನೆಗಳನ್ನು ಡಿಸೆಂಬರ್ ಅಂತ್ಯದೊಳಗೆ ಮುಗಿಸುತ್ತೇವೆ. ಅದರಲ್ಲಿ 2–3 ತಿಂಗಳು ಹೆಚ್ಚು ಕಡಿಮೆಯಾಗಬಹುದು. ಇದನ್ನು ನಾವು ಬಹಳ ಸ್ಪಷ್ಟವಾಗಿ ಹೇಳಿದ್ದನೆ. ತಾವು ಹೇಳಿದ ಹಾಗೆ, ಮುಳವಾಡ ಏತ ನೀರಾವರಿ ಯೋಜನೆಯಲ್ಲಿ ಸುಮಾರು 38 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ಏನು ನೀರು ಕೊಡಬೇಕೋ ಅದನ್ನು 'ಎ' ಸ್ಕೀಮಿನಲ್ಲಿ ಕೊಡುತ್ತೇವೆ ಎನ್ನತಕ್ಕಂಥಾದ್ದನ್ನೂ ಸ್ಪಷ್ಟವಾಗಿ ಹೇಳುತ್ತೇನೆ. ಮಾನ್ಯ ಯಡಿಯೂರಪ್ಪನವರು, ತಾವು ಮತ್ತು ಎಂ.ಬಿ. ಪಾಟೀಲರು ಪ್ರಸ್ತಾಪ ಮಾಡಿ ಸುಮಾರು 104 ಕೆರೆಗಳಿಗೆ ಕೃಷ್ಣಾ ನದಿ ನೀರನ್ನು ಲಿಫ್ಟ್‌ನಿಂದ ಎತ್ತಿ ಹಾಕಬೇಕು ಎನ್ನತಕ್ಕಂಥ ಒಂದು ಯೋಜನೆಯನ್ನು ಹೇಳಿದ್ದೀರಿ. ಇದಕ್ಕೆ 200 ಕೋಟಿ ರೂಪಾಯಿ ಆಗುತ್ತದೆ ಎಂದೂ ಹೇಳಿದ್ದೀರಿ. ನಾನು ಅದನ್ನೂ ಕೂಡ ಪರಿಶೀಲಿಸಿ, ಇದಕ್ಕೆ ಅವರು ತಂದುಕೊಟ್ಟಂಥ ಎಸ್ಟಿಮೇಟನ್ನೂ ಕೂಡ ಈಗಾಗಲೇ ಕೊಟ್ಟುಕಳುಹಿಸಿದ್ದೇನೆ. ಅದನ್ನು ಎಕ್ಸಾಮಿನ್ ಮಾಡುತ್ತಾರೆ. ಎಷ್ಟರಮಟ್ಟಿಗೆ ಸಾಧ್ಯವಿದೆ, ಅಷ್ಟರ ಮಟ್ಟಿಗೆ ಅದನ್ನೂ ಕೂಡ ಅಕಾಮಡೇಟ್ ಮಾಡತಕ್ಕಂಥ ಪ್ರಯತ್ನವನ್ನು ಮಾಡುತ್ತೇವೆ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಯಾವುದನ್ನು ಸ್ಪಷ್ಟವಾಗಿ ಹೇಳುತ್ತಿಲ್ಲ ಎಂದರೆ, ಸ್ಕೀಂ 'ಬಿ' ನಲ್ಲಿ ಬರತಕ್ಕಂಥ ಯೋಜನೆಗಳ ಹೇಳುತ್ತಿದ್ದೇನೆ ಯಾವುದನ್ನು ಸ್ಪಷ್ಟವಾಗಿ ಹೇಳುತ್ತಿಲ್ಲ ಎಂದರೆ, ಸ್ಕೀಂ 'ಬಿ' ನಲ್ಲಿ ಬರತಕ್ಕಂಥ ಯೋಜನೆಗಳ ಬಗ್ಗೆ ಇನ್ನೂ ನಾವು ಏನನ್ನು ಮಾತನಾಡಲು ಬರುವುದಿಲ್ಲ. ಕಾರಣವೆಂದರೆ, ಈಗಾಗಲೇ ಹೆಚ್.ಕೆ. ಪಾಟೀಲರು ಹೇಳಿದ ಹಾಗೆ, ಅದು ಟ್ರಿಬ್ಯುನಲ್ ಮುಂದೆ ಇದೆ. ಆ ಸ್ಕೀಮಿನಲ್ಲಿ ನಮಗೆ 200 ಟಿ.ಎಂ.ಸಿ. ನೀರು ಬರುತ್ತದೋ, 300 ಟಿ.ಎಂ.ಸಿ. ನೀರು ಬರುತ್ತದೋ, 400 ಟಿ.ಎಂ.ಸಿ. ನೀರು ಬರುತ್ತದೋ, ಎಷ್ಟು ಟಿ.ಎಂ.ಸಿ. ನೀರು ಬರುತ್ತದೋ ಅದರ ಆಧಾರದ ಮೇಲೆ ಉಳಿದ ಹತ್ತಾರು ಸ್ಕೀಂಗಳಿಗೆ ನಾವು ನೀರನ್ನು ಹಂಚಬೇಕಾಗುತ್ತದೆ. ಈಗ ನೀವು 50 ಟಿ.ಎಂ.ಸಿ. ಕೇಳುತ್ತೀರಿ, ಆಗ ಇನ್ನೊಬ್ಬರು 40 ಟಿ.ಎಂ.ಸಿ. ಕೇಳುತ್ತಾರೋ, 30 ಟಿ.ಎಂ.ಸಿ. ಕೇಳುತ್ತಾರೋ, ಆಗ ಅದು ಹೆಚ್ಚು ಕಡಿಮೆ ಆಗತಕ್ಕಂಥಾದ್ದು ಆಗುತ್ತದೆ. ಅನೇಕ ಸಾರಿ ಎಕ್ಸ್‌ಪರ್ಟ್‌ಗಳ ಅಂದಾಜುಗಳೂ ಸಹ ತಪ್ಪಾಗಿರುವುದೂ ಉಂಟು. ಬಾಳೇಕುಂದ್ರಿಯವರು ಎಕ್ಸ್‌ಪರ್ಟ್ ಎಂದು ನಾವು ಒಪ್ಪುತ್ತೇವೆ. ಅವರೇ 44 ಟಿ.ಎಂ.ಸಿ.ಗೆ ಪ್ರಪೋಸ್ ಮಾಡಿದರೆ, ಕೊನೆಗೆ ಅದು 27 ಟಿ.ಎಂ.ಸಿ. ನೀರು ಬಂತು. ಅಂದರೆ, ಅನೇಕ ಸಾರಿ ಎಕ್ಸ್‌ಪರ್ಟ್‌ಗಳ ಅಂದಾಜೂ ಸಹ ತಪ್ಪಿಹೋಗುತ್ತದೆ. ಆದ್ದರಿಂದ, ನಾವು ಈಗಾಗಲೇ ಇದರ ಬಗ್ಗೆ ಜನಗಳಿಗೆ ತಪ್ಪು ತಿಳುವಳಿಕೆ ಕೊಟ್ಟು, ತಪ್ಪು ದಾರಿಗೆ ಎಳೆಯುವುದು ಬೇಡ. ಈಗಾಗಲೇ ನಾವು ಏನು ಹೇಳಿದ್ದೇವೆ, ಅದನ್ನು ಮಾಡಿಸಿ ಕೊಡುತ್ತೇವೆ ಎನ್ನುವ ಮಾತನ್ನು ಪುನಃ ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ನ್ಯಾಯಾಧೀಕರಣದ ಮುಂದೆ ನಮ್ಮ ಪರವಾಗಿ ವಾದ ಮಾಡುವುದಕ್ಕೆ ಕರ್ನಾಟಕ ಸರ್ಕಾರ ಯಾರನ್ನು ನೇಮಕ ಮಾಡಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಈಗಾಗಲೇ ನಾವು ಲಾ ಡಿಪಾರ್ಟ್‌ಮೆಂಟಿಗೆ ಬರೆದು ಕಳುಹಿಸಿದ್ದೇವೆ. ಶ್ರೀಮಾನ್ ನಾರೀಮನ್‌ರವರು ಆಲಮಟ್ಟಿ ಬಗ್ಗೆ ಚಿಂತನೆ ಮಾಡಿ, ನಮ್ಮ ಆ ಕೇಸನ್ನು ಗೆದ್ದು ಕೊಟ್ಟಿದ್ದರು. ಅವರಿಗೇ, ಇದನ್ನು ಕಂಟಿನ್ಯೂ ಮಾಡಿ ಎಂದು ಕೇಳಿಕೊಂಡಿದ್ದೇವೆ. ಮಾನ್ಯ ಕಾನೂನು ಸಚಿವರೂ ಕೂಡ ಅವರಿಗೆ ಪತ್ರ ಬರೆದು ಕೇಳಿಕೊಂಡಿದ್ದಾರೆ. ಅವರೂ ಕೂಡ

ತಮ್ಮ ಸಮ್ಮತಿಯನ್ನು ಕೊಟ್ಟಿದ್ದಾರೆ. ಟ್ರಿಬ್ಯುನಲ್ ರಿಸ್ಯೂಮ ಆದರೆ ಅವರು ತಕ್ಷಣ ಅದಕ್ಕೆ ಅಪಿಯರ್ ಆಗುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ತಕ್ಷಣಕ್ಕೆ ನಾವು ನೀವು ಬೇಕಾದರೆ ಅಲ್ಲಿಗೆ ಹೋಗಿ ಬರೋಣ. ಮುಖ್ಯಮಂತ್ರಿಯವರಿಗೆ ಹೇಳಿಬಿಟ್ಟು ಹೋಗಿ ಅದನ್ನು ಬಗೆಹರಿಸೋಣ. ಅದು ಬೇರೆ ರೂಪ ತೆಗೆದುಕೊಳ್ಳಬಾರದು. ಇದರಲ್ಲೇನೂ ಪ್ರೆಸ್ಟೀಜಿನ ಪ್ರಶ್ನೆ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಆಗಲಿ ಒಪ್ಪಿಕೊಳ್ಳುತ್ತೇನೆ. ಆದರೆ ಸದನ ಬಿಟ್ಟು ಹೇಗೆ ಹೋಗುವುದು? ಬೇಕಾದರೆ ಸದನ (ಅಧಿವೇಶನ) ಮುಗಿದ ಮೇಲೆ ಹೋಗೋಣ. ಇಲ್ಲದಿದ್ದರೆ, ಅವರನ್ನು ನೀವು ಇಲ್ಲಿಗೇ ಕರೆಸಿ. ನಾಳೆ ನಾಡಿದ್ದರಲ್ಲಿ ಇಲ್ಲೇ ಮೀಟಿಂಗ್ ಮಾಡೋಣ. ನೀವು ಹೇಳಿದ ಹಾಗೆ, ಎಲ್ಲರೂ ಕೊಡಿ, ಎರಡು ದಿವಸಗಳಲ್ಲೇ ಇಲ್ಲೇ ತೀರ್ಮಾನ ಮಾಡೋಣ. 16ನೇ ತಾರೀಖಿನಂದು ಬೇಡ, 7ರಂದೋ, 8ರಂದೋ ಇಲ್ಲೇ ತಕ್ಷಣವೇ ಮೀಟಿಂಗ್ ಮಾಡೋಣ.

ಶ್ರೀ ವಾಟಾಳ್ ನಾಗರಾಜ್: ತಕ್ಷಣವೇ ಸರ್ವ ಪಕ್ಷಗಳ ಒಂದು ಸಭೆಯನ್ನು ಕರೆದು, ಅದಕ್ಕೆ ಸತ್ಯಾಗ್ರಹ ಮಾಡುತ್ತಿರುವಂಥ ಮುಖಂಡರುಗಳನ್ನು ಕರೆದುಬಿಡಿ. ತಮ್ಮಲ್ಲಿ ನಾವು ಏನು ಒತ್ತಾಯ ಮಾಡುತ್ತಿದ್ದೇವೆ, ಮನವಿ ಮಾಡುತ್ತಿದ್ದೇವೆ ಎಂದರೆ, 16ನೇ ತಾರೀಖು ಎನ್ನುವ ಬದಲು ನಾಳೆ ನಾಡಿದ್ದರಲ್ಲೇ ಅಂದರೆ ಬಹಳ ಬೇಗ, ತಮ್ಮ ಸರ್ಕಾರದ ಪರವಾಗಿ ಯಾರಾದರೂ ಅಲ್ಲಿಗೆ ಹೋಗಿ, ಇಂಥ ತಾರೀಖು ಬನ್ನಿ ಎಂದು ನಿಗಧಿಪಡಿಸಿ. ಸರ್ವಪಕ್ಷಗಳ ಸಭೆಯನ್ನು ಕರೆದು, ಅದರ ಜೊತೆಯಲ್ಲೇ ಅವರನ್ನೂ ಕರೆದು ತೀರ್ಮಾನ ಮಾಡಿಬಿಡೋಣ. ದಯಮಾಡಿ ಅವರನ್ನು ಕರೆಯಲು ತಾವು ಒಪ್ಪಿಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಮುಖ್ಯಮಂತ್ರಿಗಳು ನಂತರ ಬರುತ್ತಾರೆ. ಅವರ ಹತ್ತಿರ ಟೈಂ ತೆಗೆದುಕೊಂಡು ಅದನ್ನು ಮಾಡುತ್ತೇವೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ದೊಡ್ಡನಗೌಡ ಹೆಚ್ ಪಾಟೀಲ್‌ರವರು ಮಾತನಾಡಲು ಎದ್ದು ನಿಂತರು)

ಅಧ್ಯಕ್ಷರು: ಖರ್ಗೆಯವರೇ, ಕುಷ್ಟಗಿ ಶಾಸಕರು ಬಹಳ ಹೊತ್ತಿನಿಂದ ಹೇಳಲು ಪ್ರಯತ್ನ ಪಡುತ್ತಿದ್ದಾರೆ. ಅವರಿಗೆ ಏನಾಗಬೇಕೆಂದು ಕೇಳಿ.

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ): ಮುದ್ದೆಬಿಹಾಳದಲ್ಲಿ ಈಗಾಗಲೇ ತಮಗೆ ಗೊತ್ತಿದ್ದ ಹಾಗೆ 67ನೇ ಕಿ.ಮೀ.ವರೆಗೆ 'ಎ' ಸ್ಕೀಂನಲ್ಲಿ 20 ಸಾವಿರ ಎಕರೆವರೆಗೆ ನೀರಾವರಿಯಾಗಿದೆ. ತಾವು ಒಂದು ಎಕರೆ ಕೂಡ ನೀರಾವರಿಯಾಗಿಲ್ಲ ಎಂದು ಹೇಳಿದಿರಿ, ಅದಕ್ಕಾಗಿ ನಾನು ಹೇಳಿದೆ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ನೀರಾವರಿ ಸಚಿವರು ಸದನದಲ್ಲಿದ್ದಾಗ ಶ್ರೀ ನಾಡಗೌಡರವರು ಏಕೆ interfere ಆದರು ಎನ್ನುವುದು ಗೊತ್ತಾಗಿಲ್ಲ.

ಶ್ರೀ ಸಿ.ಎಸ್ ನಾಡಗೌಡ (ಅಪ್ಪಾಜಿ): ಪದೇ ಪದೇ ಅದನ್ನು ಉಚ್ಚಾರ ಮಾಡಿದಿರಿ. ಅದೇ ಕ್ಷೇತ್ರದವನಾಗಿ ನಾನು ಹೇಳುತ್ತಿದ್ದೇನೆ. 20 ಸಾವಿರ ಎಕರೆ ಪ್ರದೇಶಕ್ಕೆ ನೀರಾವರಿ ನನ್ನ ಕ್ಷೇತ್ರದಲ್ಲಾಗಿದೆ.

ಶ್ರೀ ಗೋವಿಂದ. ಎಂ. ಕಾರಜೋಳ: ಶ್ರೀ ನಾಡಗೌಡರೇ, ನಾನು ತಪ್ಪೇನೂ ಹೇಳಲಿಲ್ಲ. ನೋಡ್ರಿ. ನಾನು ಹೇಳುತ್ತಿದ್ದೇನೆ. 'ಎ' ಸ್ಕೀಂನದ್ದು ವಿವರ ಇದರಲ್ಲಿದೆ. ನಾನು ಇದನ್ನು ಕೊಟ್ಟು ಕಳುಹಿಸುತ್ತೇನೆ. ಇದರಲ್ಲೇನಾದರೂ ತಪ್ಪಿದ್ದರೆ ನಾನು ಇಲ್ಲಿಯೇ ರಾಜೀನಾಮೆ ಕೊಟ್ಟು ಹೋಗುತ್ತೇನೆ.

(ಗೊಂದಲ)

ಅಧ್ಯಕ್ಷರು: ಶ್ರೀ ಕಾರಜೋಳರವರೆ, ನಾನು ದೊಡ್ಡಣಗೌಡರನ್ನು ಪ್ರಸ್ತಾಪ ಮಾಡುವುದಕ್ಕೆ ಕರೆದಿದ್ದೇನೆ. ನೀವು ಇನ್ನೂ ನಿಂತುಕೊಂಡು ಮಾತನಾಡುತ್ತಿದ್ದೀರಲ್ಲಾ. ಇಲ್ಲಿ ಇವರದೇ ಆಗಿ ಹೋಯ್ತಲ್ಲಾ.

(ಗೊಂದಲ)

ಅಧ್ಯಕ್ಷರು: ಶ್ರೀ ಕಾರಜೋಳರವರೇ, ನಾನು ದೊಡ್ಡಣಗೌಡರನ್ನು ಕರೆದಿದ್ದೇನೆ. ಮುಖಂಡರು ನೀವು ನೀವೇ ಮಾತನಾಡುವುದು ಆಗಿಹೋಯ್ತಲ್ಲಾ. ಹೊಸ ಸದಸ್ಯರಿಗೆ ಮಾತನಾಡುವುದಕ್ಕೆ ಯಾವಾಗ ಸಮಯ ಕೊಡಬೇಕು?

(ಗೊಂದಲ)

ಶ್ರೀ ಕಾರಜೋಳ ಮಕಟಪ್ಪ ಗೋವಿಂದಪ್ಪ: ಮುಳವಾಡ ಏತ ನೀರಾವರಿ ಇವತ್ತಿಗೂ ಆಗಲಿಲ್ಲ ....

(ಗೊಂದಲ)

ಅಧ್ಯಕ್ಷರು: ನಾನು ಹೇಳುವ ಒಂದು ಮಾತನ್ನು ತಾವೆಲ್ಲಾ ಕೇಳಿ. ನೀರಾವರಿ ವಿಚಾರದಲ್ಲಿ ರಾಜಕೀಯಕರಣ ಆಗುತ್ತಿದೆ. ನನ್ನ ಅನುಭವದ ಮಾತು ಏನೆಂದರೆ, ನಮ್ಮಲ್ಲಿ ಹೇಮಾವತಿ ಯೋಜನೆ ಆಗಿದೆ. ಹೇಮಾವತಿ ಯೋಜನೆಯಲ್ಲಿ ನಮ್ಮ ತಾಲ್ಲೂಕಿನಲ್ಲಿಯೇ 46 ಸಾವಿರ ಎಕರೆ ಪ್ರದೇಶ ನೀರಾವರಿಯಾಗಬೇಕು. ನಮ್ಮದು ಆದಮೇಲೆ ಪಾಂಡವಪುರದಲ್ಲಿ 48 ಸಾವಿರ ಎಕರೆ ಪ್ರದೇಶ ನೀರಾವರಿಯಾಗಬೇಕು. ಹೀಗೆ ಕೊನೆಯವರೆಗೆ ಅಂದರೆ ನಾಗಮಂಗಲದವರೆಗೂ ಹೋಗುತ್ತದೆ. ಈಗ ನಮ್ಮ ತಾಲ್ಲೂಕಿನಲ್ಲಿ ಲೈನಿಂಗ್ ಎಲ್ಲಾ ಆಗಿದೆ. 20 ಪರ್ಸೆಂಟ್ ಸಹ ಆಗುತ್ತಾ ಇಲ್ಲ, crop pattern violation ಇದೆ. ಸರ್ಕಾರ ಸಾವಿರಾರು ಕೋಟಿ ರೂಪಾಯಿ ಹಣವನ್ನು ರೈತರ ಹೆಸರಿನಲ್ಲಿ ಯೋಜನೆಗಳಿಗೂ ಖರ್ಚು ಮಾಡಿದರೂ ಕೂಡ ಅದರ ಫಲ ರೈತರಿಗೆ ಸಿಗುತ್ತಿಲ್ಲ. ಅದಕ್ಕೋಸ್ಕರ ರಾಜಕೀಯಕರಣ ಮಾಡದೆ ಪೂರ್ಣವಾಗಿ ವೈಜ್ಞಾನಿಕವಾಗಿ ನೀರಾವರಿ ಯೋಜನೆ ಮಾಡಿದರೆ ಅದು ನಮ್ಮ ನಾಡಿಗೂ ಒಳ್ಳೆಯದು ಮತ್ತು ರೈತರಿಗೂ ಒಳ್ಳೆಯದು. ಅದನ್ನು ಎಲ್ಲರೂ ಗಮನದಲ್ಲಿಟ್ಟುಕೊಂಡರೆ ಅದರಿಂದಾಗುತ್ತದೆ. ನನ್ನ ಕ್ಷೇತ್ರಕ್ಕೆ ಒಂದೇ ಅಲ್ಲ ಎಲ್ಲರಿಗೂ ಆಸೆ ಇರುತ್ತದೆ. ಎಲ್ಲರಿಗೂ ಅವರವರ ಕ್ಷೇತ್ರದಲ್ಲಿ ನೀರಾವರಿ ಆಗಬೇಕೆಂದು ಆಸೆ ಇರುತ್ತದೆ. ಆದರೆ ವೈಜ್ಞಾನಿಕವಾಗಿ ಮಾಡಬೇಕು. ಅದು ಬಹಳ ಮುಖ್ಯ ಇಲ್ಲದಿದ್ದರೆ ಸಾವಿರಾರು ಕೋಟಿ ರೂಪಾಯಿ ಖರ್ಚು ಮಾಡಿ ನಮ್ಮ ಹಾಗೆ ನಾವು ಬರೀ ಕಾಲುವೆ ನೋಡುತ್ತಿದ್ದೇವಲ್ಲಾ ಹಾಗಾದರೆ ಪ್ರಯೋಜನ ಏನಾಗುತ್ತದೆ?

ಶ್ರೀ ಸಿ.ಎಸ್. ಪುಟ್ಟೇಗೌಡ: ಮಾನ್ಯ ಅಧ್ಯಕ್ಷರೆ, ನಾನು ಈ ಭಾಗದವನಾಗಿ ನೀರಾವರಿ ಎಂದು ನಮ್ಮ ಕಿವಿಗೆ ಬಿದ್ದಿದೆ.

ಅಧ್ಯಕ್ಷರು: ಈಗ ನಾನು ದೊಡ್ಡಣಗೌಡರನ್ನು ಕರೆದಿದ್ದೇನೆ.